# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:335 • ನೋಂದಣಿ ನಂ.:KARKAN27911 • ವಿಜಯನಗರ • 08.06.2024 • ಶನಿವಾರ • ಪುಟ:04 • ಬೆಲೆ:2
Volume:01 • Issue:335 • Reg.No:KARKAN27911 • VIJAYANAGARA • 08.06.2024 • Saturday • Page:04 • Rs:2






ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ

S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201


# ಮಳೆಗಾಲದಲ್ಲಿ ಮಲೇರಿಯಾ ಡೆಂಗ್ಯು ಹೆಚ್ಚಳ ರೋಗಗಳು ಬಾಧಿಸದಂತೆ ಕ್ರಮವಹಿಸಿ

## ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆಯಲ್ಲಿ ಸಿಇಒ ಸದಾಶಿವ ಪ್ರಭು ಖಡಕ್ ಸೂಚನೆ

■ ಹಂಪಿ ಟೈಮ್ಸ್ ಹೊಸಪೇಟೆ

ಮಲೇರಿಯಾ, ಡೆಂಗೆ, ಚಿಕೂನ್‌ಗುನ್ಯ, ಮೆದುಳು ಜ್ವರ ಮತ್ತು ಆನೆಕಾಲು ರೋಗ ಸೇರಿದಂತೆ ನಾನಾ ರೋಗಗಳ ತಡೆ ಕಾರ್ಯಕ್ರಮಗಳು ಅನುಷ್ಠಾನಗೊಳ್ಳಲು ವಿವಿಧ ಇಲಾಖೆಗಳ ಸಮನ್ವಯ ಅಗತ್ಯವಾಗಿದೆ ಎಂದು ಜಿಪಂ ಸಿಇಒ ಬಿ ಸದಾಶಿವ ಪ್ರಭು ಹೇಳಿದರು.

ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಶುಕ್ರವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಡೆದ ಜಿಲ್ಲಾ ರೋಗವಾಹಕ ಅಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ ಅಂತರ್ ಇಲಾಖೆ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಮಳೆಗಾಲ ಆರಂಭವಾಗಿದ್ದರಿಂದಾಗಿ ಈಗಾಗಲೇ ಸೊಳ್ಳೆಗಳು ಹೆಚ್ಚಾಗಿ ಮಲೇರಿಯಾ, ಡೆಂಗೆ, ಚಿಕೂನ್‌ಗುನ್ಯ, ಮೆದುಳು ಜ್ವರ ಮತ್ತು ಆನೆಕಾಲು ರೋಗಗಳು ಬಾಧಿಸಲಾರಂಭಿಸುತ್ತವೆ. ಆರೋಗ್ಯ ಇಲಾಖೆಯ ಅಧಿಕಾರಿಗಳು ಅಚ್ಚುಕಟ್ಟಾಗಿ ಕಾರ್ಯಕ್ರಮಗಳನ್ನು ರೂಪಿಸಿ ವಿವಿಧ ಇಲಾಖೆಗಳ ಸಹಕಾರ ಪಡೆದು ಅನುಷ್ಠಾನಗೊಳಿಸಬೇಕು.

ವಿಜಯನಗರ ಜಿಲ್ಲೆಯ ನಗರಸಭೆ, ವಿವಿಧ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯಿಂದ ಲಾರ್ವ ನಾಶಕಗಳಾದ ಬಿಟಿಐ ಸಿಂಪಡಣೆ, ಟೆಮಿಫಾಸ್ ಸಿಂಪಡಣೆ ಕಾರ್ಯವಾಗಬೇಕು. ಮತ್ತು ಸೊಳ್ಳೆನಾಶಕ ಧೂಮೀಕರಣ ಕ್ರಮಗಳಿಗೆ ಸಂಬಂಧಿಸಿದ ಸರಕು ಸರಂಜಾಮುಗಳ ದಾಸ್ತಾನು ಇಟ್ಟುಕೊಳ್ಳಬೇಕು. ಸರಿಯಾದ ರೀತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡಬೇಕು. ಚರಂಡಿಗಳಲ್ಲಿ ನೀರು ನಿಲ್ಲದಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಪ್ರತಿದಿನ ನಗರಸಭೆ ಪಟ್ಟಣ ಪಂಚಾಯಿತಿಯ ಕಸದ ವಾಹನಗಳ ಮೈಕಿಂಗ್‌ನಲ್ಲಿ ರೋಗವಾಹಕ ಆಶ್ರಿತ ರೋಗಗಳ ಕುರಿತು ಆಡಿಯೋಗಳನ್ನು ಪ್ರಚುರ ಪಡಿಸಬೇಕು ಎಂದು ತಿಳಿಸಿದರು.

ಲಾರ್ವಹಾರಿ ಮೀನುಗಳನ್ನು ಉತ್ಪತ್ತಿ ಮಾಡಿ ಸರಬರಾಜು ಮಾಡಲು ಸಂಗ್ರಹಣಾ ತೊಟ್ಟಿಗಳನ್ನು ಜಿಲ್ಲಾ ಮಟ್ಟದಲ್ಲಿ ನಿರ್ವಹಿಸಬೇಕು ಹಾಗೂ ಆರೋಗ್ಯ ಇಲಾಖೆಗೆ ಅವಶ್ಯವಿದ್ದ ಸಂದರ್ಭಗಳಲ್ಲಿ ಲಾರ್ವ ಹಾರಿ ಮೀನುಗಳನ್ನು ಒದಗಿಸಬೇಕು ಎಂದು ಮೀನುಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಬಸ್ ಡಿಪೋಗಳಲ್ಲಿ ಬಿಸಾಡಿದ ಟೈರ್‌ಗಳು ಮತ್ತು ಬಿಡಿಭಾಗಗಳು ಬಿಸಾಡಿದ ವಸ್ತುಗಳಲ್ಲಿ ನೀರು ಶೇಖರಣೆಗೊಂಡು ಈಡೀಸ್ ಲಾರ್ವ ಉತ್ಪತ್ತಿ ತಾಣಗಳಾಗಿ ಮಾರ್ಪಟ್ಟು, ಸೊಳ್ಳೆ ಉತ್ಪತ್ತಿ ತಾಣಗಳಾಗದಂತೆ ಅವುಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಬೇಕು ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ನಿಯಮಿತವಾಗಿ ಆರೋಗ್ಯ ಶಿಕ್ಷಣ ತರಗತಿಗಳನ್ನು ಶಾಲೆಗಳಲ್ಲಿ ಹಮ್ಮಿಕೊಂಡು ಮಕ್ಕಳಲ್ಲಿ ಅರಿವು ಮೂಡಿಸಬೇಕು. ಜನರಲ್ಲಿ ಜಾಗೃತಿ ಮೂಡಿಸಲು ಜಾಥಾ ಕಾರ್ಯಗಳನ್ನು ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಗ್ರಾಮಗಳಲ್ಲಿ ಹಮ್ಮಿಕೊಳ್ಳಬೇಕು ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸಲಹೆ ಮಾಡಿದರು.

ಸೊಳ್ಳೆಗಳ ನಿವಾರಕಗಳಾಗಿ ಬೇವಿನ ಎಣ್ಣೆ ಮತ್ತು ನಿಂಬೆಹುಲ್ಲಿನ ಎಣ್ಣೆ ಬಳಸುವ ಬಗ್ಗೆ ಪ್ರಚಾರ ನಡೆಸಲು ಆಯುಷ್ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ರೋಗವಾಹಕ ಆಶ್ರಿತ ರೋಗಗಳ ಕುರಿತಾದ ರೋಗ ಲಕ್ಷಣಗಳು, ರೋಗ ಹರಡುವಿಕೆ, ಮುಂಜಾಗ್ರತಾ ಹಾಗೂ ನಿಯಂತ್ರಣಾ ಕ್ರಮಗಳ ಕುರಿತು ಪ್ರಮುಖ ಸಂದೇಶಗಳನ್ನು ದಿನಪತ್ರಿಕೆ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಪ್ರಚುರಪಡಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಅಂಗನವಾಡಿ ಕೇಂದ್ರಗಳ ಕಿಟಕಿಗಳಿಗೆ ಸೊಳ್ಳೆ ನಿರೋಧಕ ಜಾಲರಿಗಳನ್ನು ಅಳವಡಿಸಬೇಕು ಸ್ವಚ್ಚತೆ ಕಾಪಾಡಬೇಕು. ಸೊಳ್ಳೆ ಮುಕ್ತ ಪರಿಸರ ನಿರ್ವಹಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಬಾವಿ ಮತ್ತು ಕೃಷಿ ಹೊಂಡಗಳಲ್ಲಿ ಲಾರ್ವಹಾರಿ ಮೀನುಗಳನ್ನು ಬಿಡುವಂತೆ ಸೂಕ್ತ ಕ್ರಮವಹಿಸಲು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳಾದ ಡಾ.ಕಮಲಮ್ಮ ಅವರು, ಪ್ರಾತ್ಯಕ್ಷಿಕೆಯ ಮೂಲಕ ರೋಗವಾಹಕ ಆಶ್ರಿತ ರೋಗಳ ನಿಯಂತ್ರಣ ಕಾರ್ಯಕ್ರಮದ ಉದ್ದೇಶಗಳು ಮತ್ತು ಆರೋಗ್ಯ ಇಲಾಖೆಯ ವಿವಿಧ ಕಾರ್ಯಕ್ರಮಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಂಕರ್ ನಾಯ್ಕ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಯುವರಾಜ ನಾಯ್ಕ್, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ.ಜಂಬಯ್ಯ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮ ಅಧಿಕಾರಿ ಡಾ.ಷಣ್ಮುಖ ನಾಯ್ಕ ಬಿ., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ವ್ಯವಸ್ಥಾಪಕರಾದ ಹನುಮಂತಪ್ಪ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ವಿನಯ್, ಜಿಲ್ಲಾ ಕ್ಷಯರೋಗ ನಿರ್ಮೂಲಣಾಧಿಕಾರಿ ಡಾ.ಜಗದೀಶ್ ಪಾಟ್ನೆ, ಜಿಲ್ಲಾ ಕುಷ್ಠರೋಗ ನಿರ್ಮೂಲಾಣಾಧಿಕಾರಿ ಡಾ.ರಾಧಿಕಾ, ತಾಲೂಕು ಆರೋಗ್ಯಾಧಿಕಾರಿ ಡಾ.ಭಾಸ್ಕರ್, ಐ.ಎಫ್.ಒ ಮಹಮ್ಮದ್ ತಾಸೀನ್, ಎಸ್.ಎ.ಐ (ಸಿ.ಎಂ.ಸಿ) ಶಶಿಭೂಷಣ ಹಿರೇಮಠ, ಕೆ.ಎಚ್.ಶಿವಕುಮಾರ್, ಜಿ.ಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# 2ನೇ ಪ್ರಾಶಸ್ತ್ಯ ಮತದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ.ಚಂದ್ರಶೇಖರ ಪಾಟೀಲ 4,651 ಮತಗಳ ಅಂತರ ಗೆಲುವು

■ ಹಂಪಿ ಟೈಮ್ಸ್ ಹೊಸಪೇಟೆ



ಕರ್ನಾಟಕ ವಿಧಾನ ಪರಿಷತ್ತಿಗೆ ಆಯ್ಕೆಗೆ ಈಶಾನ್ಯ ಕರ್ನಾಟಕ ಪದವೀಧರ ಚುನಾವಣೆಯ ಮತ ಎಣಿಕೆ ಫಲಿತಾಂಶ ಜೂನ್ 7ರಂದು ಹೊರಬಿದ್ದಿದ್ದು, ಎರಡನೇ ಪ್ರಾಶಸ್ತ್ಯ ಮತ ಎಣಿಕೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಚಂದ್ರಶೇಖರ ಪಾಟೀಲ ಅವರು 4,651 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

**ಡಾ.ಚಂದ್ರಶೇಖರ ಪಾಟೀಲ – 39,496 ಮತ**
**ಅಮರನಾಥ ಪಾಟೀಲ – 35,050 ಮತ**
**ಎನ್.ಪ್ರತಾಪ ರೆಡ್ಡಿ – 17,421 ಮತ**

**1,56,623 ಅರ್ಹ ಮತದಾರರು**
**1,09,031 ಮತದಾನ**
**96,518 ಮತ ಪುರಸ್ಕೃತ**
**12,513 ಮತ ತಿರಸ್ಕೃತ**
**ಶೇ.69.61 ಮತದಾನ**

ಕಲಬುರಗಿ ನಗರದ ಗುಲಬರ್ಗಾ ವಿ.ವಿ.ಯ ಸಾದ್ವಿ ಶಿರೋಮಣಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅಧ್ಯಯನ ಪೀಠ ಮತ್ತು ಸಂಶೋಧನಾ ಕೇಂದ್ರದಲ್ಲಿ ಜೂನ್ 6ರಂದು ಬೆಳಿಗ್ಗೆ 8 ಗಂಟೆಯಿಂದ ಆರಂಭವಾದ ಮತ ಎಣಿಕೆ ಕಾರ್ಯ ಜೂನ್ 7ರ ಬೆಳಿಗ್ಗೆ 11 ಗಂಟೆವರೆಗೂ ನಿರಂತರವಾಗಿ ನಡೆಯಿತು.

ಕೊನೆಯದಾಗಿ ಎರಡನೇ ಪ್ರಾಶಸ್ತ್ಯ ಮತ ಎಣಿಕೆ ನಂತರ ವಿನ್ನಿಂಗ್ ಕೋಟಾ ತಲುಪದಿದ್ದರೂ ಕಾಂಗ್ರೆಸ್ ಅಭ್ಯರ್ಥಿ ಹೆಚ್ಚಿನ ಮತ ಪಡೆದ ಕಾರಣ ಚುನಾವಣಾಧಿಕಾರಿ ಕೃಷ್ಣ ಭಾಜಪೇಯಿ ಅವರು ಡಾ. ಚಂದ್ರಶೇಖರ ಪಾಟೀಲ ಅವರಿಗೆ ಗೆಲುವಿನ ಪ್ರಮಾಣ ಪತ್ರ ವಿತರಿಸುವ ಮೂಲಕ ಅಧಿಕೃತವಾಗಿ ಫಲಿತಾಂಶವನ್ನು ಘೋಷಿಸಿದರು.

ಇದಕ್ಕು ಮುನ್ನ ನಡೆದ ಪ್ರಥಮ ಪ್ರಾಶಸ್ತ್ಯ ಮತ ಎಣಿಕೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿ ಡಾ.ಚಂದ್ರಶೇಖರ ಪಾಟೀಲ–39,496, ಬಿ.ಜೆ.ಪಿ ಅಭ್ಯರ್ಥಿ ಅಮರನಾಥ ಪಾಟೀಲ–35,050, ಸ್ವತಂತ್ರ ಅಭ್ಯರ್ಥಿಗಳಾದ ಎನ್.ಪ್ರತಾಪ ರೆಡ್ಡಿ–17,421, ಅನಿಮೇಶ್ ಮಹಾರುದ್ರಪ್ಪ ಅಂದವಾಡೆ–111, ಅಬ್ದುಲ್ ಜಬ್ಬಾರ ಗೋಳಾ–201, ಕಾಶಿನಾಥ ಎಂ. ಗಿಲೇರಿ–276, ಬಸವರಾಜ ಮ್ಯಾಗಲಮನಿ–59, ಮಹೆಬೂಬ್ ಮೊಹಮ್ಮದ್ ಖಾಜಾ ಹುಸೇನ್ ವಂಟೇಲಿ–57, ಎಂ.ಜಾವಿದ್ ಹುಸೇನ್–194, ರಿಯಾಜ್ ಅಹ್ಮದ–74, ವಿಲಾಸ ಎಂ. ಕಣಮಸ್ಕರ್–817, ಶರಣಬಸಪ್ಪ ಪಿ. ಸುಗೂರ–1,392, ಎ.ಶರಣ ಐ.ಟಿ–73, ಎ.ಎಸ್.ನಾಗನಹಳ್ಳಿ–17, ಶಿವಕುಮಾರ ಹಿರೇಮಠ–167, ಸತೀಣಕುಮಾರ ಕೋಬಾಳಕರ್–792, ಸಾಯಿನಾಥ ನಾಗೇಶ್ವರ ಮೇದಾ–72, ಡಾ.ಸುನೀಲಕುಮಾರ ಎಚ್. ವಂಟಿ–116 ಹಾಗೂ ಸುರೇಶ ದವಿದಪ್ಪ–133 ಮತಗಳು ಪಡೆದರು. ಇದರಲ್ಲಿ ಚಲಾವಣೆಯಾದ 1,09,031 ಮತಗಳ ಪೈಕಿ 96,518 ಮತ ಪುರಸ್ಕೃತವಾದರೆ 12,513 ಮತಗಳು ತಿರಸ್ಕೃತವಾದವು.

ಪ್ರಥಮ ಪ್ರಾಶಸ್ತ್ಯ ಮತ ಎಣಿಕೆ ನಂತರ ಚಲಾವಣೆಯಾದ 1,09,031 ಮತಗಳ ಪೈಕಿ 96,518 ಮತ ಪುರಸ್ಕೃತಗೊಂಡ ಹಿನ್ನೆಲೆಯಲ್ಲಿ ಪುರಸ್ಕೃತ ಮತದಲ್ಲಿ ಶೇ.50+1 ಮತ ಅಂದರೆ 48,260 ಮತ >>2

## ಮೈಕ್ರೋ ನ್ಯೂಸ್

# ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ಕಾರ್ಯಕ್ರಮ

ಹಂಪಿ ಟೈಮ್ಸ್ ಹೊಸಪೇಟೆ

ವಸತಿ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನ್ ರಾಜ್ ಸಿಂಗ್ ಅವರು ಜೂನ್ ಮಾಹೆಯಲ್ಲಿ ವಿಜಯನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಜೂನ್ 11ರಂದು ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ರಸ್ತೆಯ ಮುಖಾಂತರ ಹೊರಟು ಬೆಳಿಗ್ಗೆ 11 ಗಂಟೆಗೆ ವಿಜಯನಗರ ಜಿಲ್ಲೆಗೆ ಆಗಮಿಸುವರು. ಬಳಿಕ 11.30ಕ್ಕೆ ಜಿಲ್ಲಾಧಿಕಾರಿಗಳೊಂದಿಗೆ ಹಾಗೂ ಇತರೆ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಮಧ್ಯಾಹ್ನ 3 ರಿಂದ ಜಿಲ್ಲೆಯ ವಿವಿಧೆಡೆ ಸ್ಥಳ ಪರಿವೀಕ್ಷಣೆ ನಡೆಸಲಿದ್ದಾರೆ. ಬಳಿಕ ಜಿಲ್ಲೆಯಲ್ಲಿ ವಾಸ್ತವ್ಯ ಹೂಡುವರು.

ಜೂನ್ 12ರಂದು ಬೆಳಿಗ್ಗೆ 10 ಗಂಟೆಯಿಂದ ಜಿಲ್ಲೆಯಲ್ಲಿ ಪುನಃ ಸ್ಥಳ ಪರಿಶೀಲನೆ ನಡೆಸುವರು. ಅಂದು ಮಧ್ಯಾಹ್ನ 2 ಗಂಟೆಗೆ ವಿಜಯನಗರದಿಂದ ನಿರ್ಗಮಿಸಿ ರಸ್ತೆಯ ಮುಖಾಂತರ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು ತಿಳಿಸಿದ್ದಾರೆ.

# ವಿದ್ಯುತ್ ಕಂಬದ ಅರ್ಥಿಂಗ್ ತಂತಿ ಸ್ಪರ್ಶಿಸಿ ಬಾಲಕಿ ಸಾವು

■ ಹಂಪಿ ಟೈಮ್ಸ್ ಕೂಡ್ಲಿಗಿ



ತಾಲೂಕಿನ ಪೂಜಾರ ಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾತ್ರಿಕೆಹಟ್ಟಿ ಗ್ರಾಮದಲ್ಲಿ ಆಟವಾಡುತ್ತಿದ್ದ ವೇಳೆ ವಿದ್ಯುತ್ ಪ್ರವಹಿಸುತ್ತಿದ್ದ ವಿದ್ಯುತ್ ಕಂಬದ ಅರ್ಥಿಂಗ್ ವೈರ್ ಸ್ಪರ್ಶಿಸಿ ಎಂಟು ವರ್ಷದ ಬಾಲಕಿ ತುಳಸಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಸಂಭವಿಸಿದೆ.

ತುಳಸಿ ಬೋರಯ್ಯ ಎಂಬುವರ ಪುತ್ರಿಯಾಗಿದ್ದು, ಶುಕ್ರವಾರ ಬೆಳಗ್ಗೆ ಸರ್ಕಾರಿ ಶಾಲೆಯ ಪಕ್ಕದ ಮನೆ ಮುಂದೆ ಆಟ ಆಡುತ್ತಿದ್ದ ವೇಳೆ ಸಮೀಪದಲ್ಲಿದ್ದ ವಿದ್ಯುತ್ ಕಂಬದ ಅರ್ಥಿಂಗ್ ತಂತಿಯನ್ನು ಆಕಸ್ಮಿಕವಾಗಿ ಎಂದಿನಂತೆ ಮುಟ್ಟಿದ್ದರಿಂದ ಈ ದುರ್ಘಟನೆ ಸಂಭವಿಸಿದೆ. ನಿರಂತರ ಮಳೆಯಿಂದಾಗಿ ಆ ವಿದ್ಯುತ್ ಕಂಬದಲ್ಲಿ ವಿದ್ಯುತ್ ಪ್ರವಹಿಸಿತ್ತೆನ್ನಲಾಗಿದೆ. ಅದರಿಂದ ವಿದ್ಯುತ್ ಪ್ರವಹಿಸಿ ಸಾವು ಸಂಭವಿಸಿದೆ. ಜೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯವೇ ಇಂದು ಮಗು ಸಾವಿಗೆ ಕಾರಣವಾಗಿದೆ. ಗ್ರಾಮದಲ್ಲಿ ಎಲ್ಲಂದರಲ್ಲಿ ವಿದ್ಯುತ್ ತಂತಿಗಳು ಜೋತು ಬಿದಿದ್ದು, ಕಂಬದಲ್ಲಿ ಅರ್ಥಿಂಗ್ ವೈರಿಂಗ್ ಇರುತ್ತೆ ಎಂಬುದು ಪರಿಶೀಲನೆ ಮಾಡದೆ ಇರುವ ಜೆಸ್ಕಾಂ ಅಧಿಕಾರಿಗಳು ಗಮನ ಹರಿಸದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕೆ ಕಾನಾಹೊಸಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಎರಿಯಪ್ಪ ಅಂಗಡಿ ಹಾಗೂ ಹೂಡೇಂ ಜೆಸ್ಕಾಂ ಅಧಿಕಾರಿ ಮಾರಪ್ಪ ಭೇಟಿ ನೀಡಿ ಪರಿಶೀಲಿಸಿ ಕುಟುಂಬಸ್ಥರಿಗೆ ಹಾಗೂ ಊರಿನ ಮುಖಂಡರಿಗೆ ಸಮಾಧಾನ ಪಡಿಸಿ ಮನವೊಲಿಸಿ ನಂತರ ಮೃತಪಟ್ಟ ಬಾಲಕಿಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳಿಸದರು.



ಹೊಸ ಹಂಪಿ ಪ್ರದೇಶದಲ್ಲಿ ನೀರಿನ ಸಮಸ್ಯೆ ಎದುರಿಸುತ್ತಿದ್ದ ನಿವಾಸಿಗಳಿಗೆ ಶುಕ್ರವಾರ ಟ್ಯಾಂಕರ್ ನೀರು ಪೂರೈಸಲಾಗಿದೆ.







## ಓದುಗರ ಓಲೆ

# ವಿದ್ಯಾವಂತ ಕಾರ್ಮಿಕರು

■ ಶಂಕರ ಹೆಚ್ ಹಳೇ ಮಲಪನಗುಡಿ



ಕಾರ್ಮಿಕರು ಎಂದರೆ ಎಲ್ಲಾರಿಗೂ ತಟ್ಟನೆ ಮನಸಿಗೆ ಬರುವುದು ಅವಿದ್ಯಾವಂತರು ಪ್ರಪಂಚದ ಬಗ್ಗೆ ಕಡಿಮೆ ಜ್ಞಾನ ಹೊಂದಿರುವವರು ಎಂದು ಎಲ್ಲಾರು ಭಾವಿಸಿದ್ದಾರೆ. ಕಾರ್ಮಿಕರು ಎಂದರೆ ಕೇವಲ ಅಷ್ಟೇ ಅಲ್ಲ ಎಷ್ಟೋ ಬಡ ವಿಧ್ಯಾರ್ಥಿಗಳು ತಮ್ಮಲ್ಲಿ ಅಡಗಿರುವ ಪ್ರತಿಭೆಯನ್ನು ಮುಖ್ಯ ವೇದಿಕೆಗೆ ತರಲಾಗದೆ ಅವರ ಆಸೆ-ಆಕಾಂಕ್ಷೆಗಳನ್ನು ಬದಿಗೊತ್ತಿ ಮನೆಯ ಜವಬ್ದಾರಿಗಳನ್ನು ಹೆಗಲ ಮೇಲಿ ಹೋರಲು ಆರಂಭಿಸುತ್ತಾರೆ. ಉನ್ನತ ಶಿಕ್ಷಣ ಪಡೆದವರು ಸಹ ಕೆಲಸಗಳಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಡ ವಿಧ್ಯಾರ್ಥಿಗಳು ಆದ್ದರಿಂದ ಮನೆಯಲ್ಲಿನ ತೊಂದರೆಗಳಿಗೆ ತಲೆಬಾಗಿ ತಮ್ಮ ಕರ್ತವ್ಯ ನಿಭಾಯಿಸುವ ಸಲುವಾಗಿ ಅನಿವಾರ್ಯವಾಗಿ ತಮ್ಮ ಓದಿಗೆ ಅನುಗುಣವಾಗದಿದ್ದರು ಸಹ ಸಿಕ್ಕಂತಹ ಕೆಲಸಗಳಿಗೆ ಹೋಗುತ್ತಾರೆ. ಉದಾಹರಣೆಗೆ ಗಾರೆ ಕೆಲಸ, ಹೊಟೇಲ್‌ಗಳಲ್ಲಿ, ಕಾರ್ಖಾನೆಗಳಲ್ಲಿ, ಮೆಕಾನಿಕ್ ಶಾಪ್‌ಗಳಲ್ಲಿ, ಕಾರ್, ಆಟೋ, ಬಸ್‌ಗಳಂತಹ ವಾಹನಗಳ ಚಾಲಕರಾಗಿ ಹಾಗೂ ಇನ್ನಿತರೆ ಕಡೆ ಕೆಲಸ ಮಾಡುತ್ತಿರುತ್ತಾರೆ. ಕಾರ್ಮಿಕರು ಕೆಲಸ ಮಾಡುವ ಸ್ಥಳಗಳಲ್ಲಿ ಹೋಗಿ ನೋಡಿದರೆ ಎಷ್ಟೋ ವಿದ್ಯಾವಂತ ಪ್ರತಿಭೆಗಳು ಕಾಣ ಸಿಗುತ್ತಾರೆ. ಗಾರೆ ಕೆಲಸ ಮಾಡುವವರಲ್ಲಿ ಸಹ ಪಧವಿದರ ಹಾಗೂ ಉನ್ನತ ಮಟ್ಟದ ವಿದ್ಯಾಭ್ಯಾಸವನ್ನು ಮಾಡಿದವರು ಸಿಗುತ್ತಾರೆ. ಹಿಗೇ ನಮ್ಮ ಸಮಾಜದಲ್ಲಿ ಹಲವು ಕಡೆಗಳಲ್ಲಿ ಕಾರ್ಮಿಕರು ತಮ್ಮ ವಿದ್ಯಾಭ್ಯಾಸಕ್ಕೆಸಂಬಂಧವಿಲ್ಲದ ಕೆಲಸಗಳನ್ನು ಮಾಡುತ್ತಿರುತ್ತಾರೆ. ಜೀವನ ಎಂದರೆ ಏನೆಂದು ಕಲಿಸುವ ತಿಳುವಳಿಕೆಯೇ ವಿದ್ಯೆ ಎಂಬುದು ನಾವೇಲ್ಲ ನಂಬಿರುವುದು ಹಾಗೆ ಆ ಕಲಿತಂತಹ ವಿದ್ಯೆ ಯಾವುದೇ ಕಾರಣಕ್ಕೂ ಮೂಲೆಗುಂಪು ಆಗದಿರಲಿ ಎಂಬುದು ನಮ್ಮ ಆಶಯವಾಗಿದೆ. ಕೇವಲ ಸರಕಾರಗಳು ಮಾತ್ರವಲ್ಲದೆ ಸಮಾಜವು ಕೂಡ ಕಾರ್ಮಿಕರನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಸಮಾಜದಲ್ಲಿ ಅವರಿಗೂ ಒಂದು ಸ್ಥಾನ ಮಾನಗಳನ್ನು ನೀಡಬೇಕು. ಕೆಲಸ ಮಾಡುವ ಪ್ರತಿಯೊಬ್ಬರಿಗೂ ಅವರು ಮಾಡುವ ಕೆಲಸಕ್ಕೆ ಅನುಕೂಲಕರವಾದ ಸಂಭಾವನೆ ನೀಡಿ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಸರಕಾರಗಳು ಕೆಲಸ ಮಾಡಬೇಕು. ಹಿಗೇ ವಿದ್ಯಾವಂತರಾದರು ಮನೆಯ ಜವಾಬ್ದಾರಿಗಳಿಂದ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿರುವವರು ಮಾಡುವ ಕೆಲಸಗಳಲ್ಲೆ ಅವರಿಗೆ ತೃಪ್ತಿ ಸಿಗುವ ಹಾಗೆ ಅವರೇ ಸಮಾಜದಲ್ಲಿ ಉತ್ತಮ ಜೀವನ ರೂಪಿಸಿಕೊಳ್ಳುವಂತೆ ಆಗಲಿ.



## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಡ
ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಭಾಷಾ ಪ್ರಯೋಗಾಲಯ



ಅದೊಂದು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ. ಮಕ್ಕಳು ಕೈಯಲ್ಲಿ ಮೈಕ್ ಹಿಡಿದಿದ್ದಾರೆ. ಎದುರಿಗೆ ವೆಬ್ ಕ್ಯಾಮರವಿದೆ. ಆ ಮಕ್ಕಳು ತಮ್ಮ ಪಾಠ, ಪದ್ಯಗಳನ್ನು ತಮ್ಮದೇ ಧ್ವನಿಯಲ್ಲಿ ಹೇಳುತ್ತಾರೆ. ಮತ್ತೆ ಮತ್ತೆ ಅವರ ಧ್ವನಿಯನ್ನು ಅವರು ಕೇಳಿ ಕುಣಿದಾಡುತ್ತಾರೆ. ಅವರ ಪೋಷಕರಿಗಂತೂ ಇದು ಅಚ್ಚರಿ ಎನಿಸಿದೆ. ಶಿಕ್ಷಕರು ಮಕ್ಕಳ ಕಲಿಕೆಗೆ ಪೂರಕವಾದ ಸಿ.ಡಿ. ಇತ್ಯಾದಿಗಳನ್ನು ತೋರಿಸುವುದನ್ನು ಮರೆಯುವುದಿಲ್ಲ. ಸ್ವಲ್ಪ ಮನಸು ಮಾಡಿದಲ್ಲಿ ಒಂದು ಲ್ಯಾಪ್‌ಟ್ಯಾಪ್‌ನಲ್ಲಿಯೇ ಭಾಷಾ ಪ್ರಯೋಗಾಲಯವನ್ನು ಸ್ಥಾಪಿಸಬಹುದು ಎಂಬುದಕ್ಕೆ ಇದು ಮಾದರಿಯಾಗಿದೆ.

ಭಾಷೆಯಲ್ಲಿ ವ್ಯಾಕರಣ, ಶಬ್ಧ ಸಂಗ್ರಹ, ಅಲಂಕಾರಿಕ ಪದಗಳ ಬಳಕೆ ಇತ್ಯಾದಿಗಳನ್ನು ಬಳಸಿ ಸುಲಭವಾಗಿ ಸಂವಹನ ಮಾಡಬೇಕು ಎಂಬುದು ಬಹಳ ಮಕ್ಕಳ ಆಶಯ. ಆದರೆ ಸೂಕ್ತ ಮಾರ್ಗದರ್ಶನ ಮತ್ತು ಕಲಿಕಾ ಸಾಮಾಗ್ರಿಗಳ ಕೊರತೆಯಿಂದ ಈ ನಿಟ್ಟಿನಲ್ಲಿ ಮಕ್ಕಳು ಹಿನ್ನಡೆ ಅನುಭವಿಸುತ್ತಿದ್ದಾರೆ. ಅದಕ್ಕೆ ಸರಳವಾದ ಪರಿಹಾರವೇ ಭಾಷಾ ಪ್ರಯೋಗಾಲಯ. ಗಣಿತ ಮತ್ತು ವಿಜ್ಞಾನಕ್ಕೆ ಇರುವಂತೆ ಭಾಷೆಗೂ ಪ್ರಯೋಗಾಲಯ ಇದೆ. ಮಕ್ಕಳಲ್ಲಿ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿ, ಭಾಷಾ ಕೌಶಲವನ್ನು ಗಳಿಸುತ್ತಾ, ಭಾಷಾ ಕೌಶಲಗಳನ್ನು ಅಳವಡಿಸಿ ಕೊಳ್ಳಲು ಉಂಟಾಗುವ ಅಡತಡೆಗಳನ್ನು ಕಂಡುಕೊಂಡು, ಪರಿಹಾರ ಗಳನ್ನು ಕಂಡುಕೊಳ್ಳುತ್ತಾ, ನಿರಂತರ ಅಭ್ಯಾಸ ಮಾಡಲು ಸೂಕ್ತವಾದ ಮತ್ತು ವೈಜ್ಞಾನಿಕ ಹಿನ್ನಲೆಯ ಪ್ರಯೋಗಾಲಯವನ್ನು ಭಾಷಾ ಪ್ರಯೋಗಾಲ ಎನ್ನುತ್ತಾರೆ.



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Hampi Times E-paper
SCAN AND READ

ಭಾಷೆಯಲ್ಲಿ ವರ್ಣಮಾಲೆ ಅಭ್ಯಾಸ, ಪದಗಳ ಸ್ಪಷ್ಟ ಉಚ್ಚಾರಣೆ, ಅರ್ಥವಿವರಣೆ, ಪ್ರಯೋಗ, ವಾಕ್ಯ ರಚನೆ, ಇವುಗಳನ್ನು ವ್ಯವಸ್ಥಿತವಾಗಿ ಕಲಿಸುವ ಸಲುವಾಗಿ ಭಾಷಾ ಪ್ರಯೋಗಾಲಯ ಸ್ಥಾಪಿಸಬೇಕಾಗುತ್ತದೆ. ತರಗತಿ ಪ್ರವಚನ ಏಕಮುಖ ಆಯಾಮ ಹೊಂದಿದ್ದರೆ ಈ ಪ್ರಯೋಗಾಲಯ ಕಲಿಕೆ ಬಹುಮುಖ ಆಯಾಮ ಹೊಂದಿದೆ. ಶಬ್ದಗಳ ಉಚ್ಚಾರಣೆ, ಯಾವ ಪದದ ಮೇಲೆ ಎಷ್ಟು ಸ್ವರಭಾರ ಇರಬೇಕು, ಸಂದರ್ಭಕ್ಕೆ ತಕ್ಕಂತೆ ಯಾವ ಶಬ್ದಕ್ಕೆ ಒತ್ತು ನೀಡಬೇಕು ಎಂಬುದನ್ನು ಇಲ್ಲಿ ಕಲಿಯಬಹುದು. ಸಂದರ್ಶನಗಳನ್ನು ಹೇಗೆ ಎದುರಿಸಬೇಕು, ವಿಚಾರ ಸಂಕಿರಣದ ಸಿದ್ಧತೆ ಹೇಗಿರಬೇಕು ಎಂಬುದನ್ನು ತಿಳಿಯಲು ಭಾಷಾ ಪ್ರಯೋಗಾಲಯ ಮಹತ್ವದ ಪಾತ್ರ ವಹಿಸುತ್ತದೆ.

**ಭಾಷಾ ಪ್ರಯೋಗಾಲಯ ಅಗತ್ಯವೇ. . . .**

ಬಾಷೆಯ ಅನೇಕ ಅಂಶಗಳನ್ನು ತರಗತಿಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಬೋಧನೆ ಮಾಡಿರುತ್ತಾರೆ. ಅದನ್ನು ವಿದ್ಯಾರ್ಥಿಗಳು ಸ್ವತಃ ಕೈಗೊಳ್ಳುವಂತೆ ಮಾಡಲು ಪ್ರಯೋಗಾಲಯ ಅಗತ್ಯ. ತರಗತಿಗಳಲ್ಲಿ ಮಾಡಲಾಗದ ಚಟುವಟಿಕೆಗಳನ್ನು ಮಾಡಲು ಇದು ಸೂಕ್ತ ವೇದಿಕೆಯಾಗುತ್ತದೆ. ಅಮೂರ್ತ ಕಲ್ಪನೆಗಳನ್ನು ಮೂರ್ತವಾಗಿಸುತ್ತಾ, ಪ್ರಾಯೋಗಿಕತೆಗೆ ಒತ್ತು ನೀಡುವಲ್ಲಿ ಭಾಷಾ ಪ್ರಯೋಗಾಲಯ ಯಶಸ್ವಿಯಾಗುತ್ತದೆ. ತರಗತಿ ಕಲಿಕೆಯನ್ನು ಒರೆಗೆ ಹಚ್ಚಲು ಮತ್ತು ಭಾಷೆಯ ಮೂಲ ಕಲ್ಪನೆಗಳನ್ನು ಸರಳವಾಗಿ ತಿಳಿಯಲು ಪ್ರೇರಣೆ ನೀಡುತ್ತದೆ. ಉಚ್ಛಾರಣೆಯ ಮಾದರಿಗಳನ್ನು ತಯಾರಿಸಿ ಸರಳವಾಗಿ ಮನನ ಮಡಿಕೊಳ್ಳಲು ಬೆಂಬಲ ನೀಡುತ್ತದೆ. ಒಂದು ಕಲ್ಪನೆಯನ್ನು ಬೇರೆ ಬೇರೆ ದೃಷ್ಟಿಕೋನದಿಂದ ನೋಡಲು ಮತ್ತು ವಿಭಿನ್ನವಾಗಿ ಕಲಿಯಲು ಪ್ರಯೋಗಾಲಯವಿದ್ದರೆ ಚೆನ್ನ. ಭಾಷೆಯಲ್ಲಿ ಆಸಕ್ತಿ, ಕುತೂಹಲ ಮತ್ತು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ಭಾಷಾ ಪ್ರಯೋಗಾಲಯದ ಕೊಡುಗೆ ಹೆಚ್ಚು ಮೌಲ್ಯದ್ದಾಗಿದೆ.

ಮಕ್ಕಳನ್ನು ಭಾಷಾ ಕಲೆಕೆಯತ್ತ ಆಕರ್ಷಿಸಲು ಭಾಷಾ ಪ್ರಯೋಗಾಲಯ ಮಹತ್ವದ ಪಾತ್ರ ವಹಿಸುತ್ತದೆ. ಮಕ್ಕಳು ಸಾಮಾನ್ಯವಾಗಿ ಮಾಡುವ ದೋಷಗಳನ್ನು ಪತ್ತೆ ಹಚ್ಚುತ್ತಾ ಅವುಗಳನ್ನುಸಂಪೂರ್ಣ ಪರಿಹರಿಸುವಲ್ಲಿಇದು ಯಶಶ್ವಿಯಾಗುತ್ತದೆ. ಒಂದು ಸಾರಿ ಹೇಳಿದ ಮೇಲೆ ಅದನ್ನು ದಾಖಲೆ ಮಾಡಲು ಮತ್ತು ಅಗತ್ಯವಿದ್ದಾಗಲೆಲ್ಲಾ ಮತ್ತೆ ಮತ್ತೆ ಅದನ್ನು ಆಲಿಸುತ್ತಾ, ತಮ್ಮ ಸರಿ-ತಪ್ಪುಗಳನ್ನು ಕಂಡುಕೊಳ್ಳು ಭಾಷಾ ಪ್ರಯೋಗಾಲಯ ಅವಕಾಶ ನೀಡುತ್ತದೆ. ಭಾಷೆಯ ವಿವಿಧ ಧ್ವನಿಗಳ ಮಾದರಿಗಳನ್ನು ಕೇಳುವ ಅವಕಾಶ ಸಿಗುತ್ತದೆ. ಭಾಷೆಗಳ ಪ್ರಸಿದ್ಧ ಗ್ರಂಥ, ಲೇಖಕರ ಪರಿಚಯಗಳನ್ನು ಮಕ್ಕಳು ನೇರವಾಗಿ ನೋಡಲು-ತಿಳಿಯಲು ಸಾಧ್ಯವಿದೆ. ಭಾಷೆಯ ಕೆಲವು ಮೂಲ ಕೃತಿಗಳನ್ನು ಮಕ್ಕಳು ಅಧ್ಯಯನ ಮಾಡಲು ಭಾಷಾ ಪ್ರಯೋಗಾಲಯ ಅಗತ್ಯವಾಗಿದೆ.

ಈ ಪ್ರಯೋಗಾಲದಿಂದ ಭಾಷೆಯ ವೈಜ್ಞಾನಿಕ ಅಧ್ಯಯನ ಸುಲಭ ಸಾಧ್ಯ. ಏಕೆಂದರೆ ಶಿಕ್ಷಕ ಮತ್ತು ಪ್ರತಿ ವಿದ್ಯಾರ್ಥಿ ಪರಸ್ಪರ ನಡುವೆ ದ್ವಿಮುಖ ಸಂವಹನ ಏರ್ಪಡುವುದರಿಂದ ವಿದ್ಯಾರ್ಥಿ ಸಂದೇಹಗಳನ್ನು ಶಿಕ್ಷಕರಿಂದ ತಕ್ಷಣವೇ ಪರಿಹರಿಸಿಕೊಳ್ಳಬಹುದು. ಹೆಡ್‌ಸೆಟ್ ವ್ಯವಸ್ಥೆ ಇರುವುದರಿಂದ ಪದ ಪ್ರಯೋಗ, ವಾಕ್ಯರಚನೆಯಲ್ಲಿ ಸ್ಫುಟತೆ, ಸರಾಗ ಕಂಡುಕೊಳ್ಳಬಹುದು. ನಾಲ್ಕರಿಂದ ಆರು ಮಂದಿ ಗುಂಪಾಗಿ ಮತ್ತು ಇಬ್ಬಿಬ್ಬರು ಜೊತೆಯಾಗಿ ಅಭ್ಯಸಿಸಲೂ ಅವಕಾಶವಿರುವುದರಿಂದ ಭಾಷೆಯನ್ನು ಸುಲಲಿತವಾಗಿ ಮತ್ತು ತ್ವರಿತವಾಗಿ ಕಲಿಯಲು ಸಾಧ್ಯವಾಗುತ್ತದೆ. ಭಾಷೆ ಪ್ರೌಢಿಮೆ, ಸಂಸ್ಕೃತಿ, ವೈಶಿಷ್ಟ್ಯತೆ ಹಿರಿಮೆ ಗರಿಮೆಗಳ ಬಗ್ಗೆ ದೃಶ್ಯ ಮತ್ತು ಶ್ರಾವ್ಯದ ಮೂಲಕ ತಿಳಿಯಬಹುದು. ತರಗತಿಯಲ್ಲಿ ಸೈದ್ಧಾಂತಿಕವಾಗಿ ಕಲಿತ ಅಂಶಗಳನ್ನು ಮತ್ತಷ್ಟು ನಿಖರವಾಗಿ, ಸಮರ್ಪಕವಾಗಿ ತಿಳಿಯಲು ಅವಕಾಶ ಇದೆ. ಶಬ್ದದ ಅಲೆಗಳು, ಪದಗಳ ಉಚ್ಚಾರಣೆ ನಿಯಮಗಳು, ವ್ಯಾಕರಣ ಇತ್ಯಾದಿಗಳ ಬಗ್ಗೆ ಅರಿಯಬಹುದು.

**ಬಾಷಾ ಪ್ರಯೋಗಾಲಯ ಹೇಗಿರಬೇಕು ಅಂದರೆ . . .**

ಗಣಿತ ಮತ್ತು ವಿಜ್ಞಾನ ಪ್ರಯೋಗಾಲಯದ ಕಲ್ಪನೆ ನಮಗೆಲ್ಲಾ ಸ್ಪಷ್ಟವಾಗಿದೆ. ಅದರಂತೆ ಭಾಷಾ ಪ್ರಯೋಗಾಲಯವನ್ನು ಶಾಲೆಯಲ್ಲಿ ಪ್ರಾರಂಭಿಸಬಹುದು. ಸರಿಯಾಗಿ ಗಾಳಿ-ಬೆಳಕು ಇರುವ ಒಂದು ಕೊಠಡಿಯನು ಆಯ್ಕೆ ಮಾಡಿಕೊಳ್ಳಬೇಕು. ಅದೊಂದು ಚಿಕ್ಕ ಸಂಶೋಧನಾಲಯವಿದ್ದಂತೆ. ಅದರಲ್ಲಿ ಸೂಕ್ತವಾದ ಪೀಠೋಪಕರಣಗಳಿರಲೇಬೇಕು. ಒಳಭಾಗದ ಗೋಡೆಗಳಲ್ಲಿ ಸಾಧ್ಯವಾದಷ್ಟು ಹೆಚ್ಚು ಕಪಾಟುಗಳಿರಬೇಕು. ಕಪಾಟುಗಳನ್ನು ಕನ್ನಡ, ಇಂಗ್ಲೀಷ್, ಹಿಂದಿ ಎಂದು ವಿಭಾಗಿಸಿದರೆ ಒಳಿತು. ವಿದ್ಯುತ್ ಮತ್ತು ನೀರಿನ ಸೌಲಭ್ಯವಿರಲಿ. ಅಗತ್ಯ ಸಾಮಾಗ್ರಿಗಳಾದ ರೇಡಿಯೋ, ಟೇಪ ರಿಕಾರ್ಡ್‌ರ್, ಟಿ,ವಿ, ಸಿಡಿ-ಡಿ.ವಿ.ಡಿ, ಕಂಪ್ಯೂಟರ್, ಅಂತರ್ ಜಾಲ, ಓ.ಹೆಚ್.ಪಿ, ಪ್ರಿಂಟರ್‌ಗಳು ಸುಸಜ್ಜಿತವಾಗಿದ್ದು, ಮಕ್ಕಳು ಬಳಸಲು ಅನುಕೂಲ ಅಗತ್ಯ.

ಭಾಷೆಯ ಕುರಿತಾದ ವಿವಿಧ ಸಂಶೋಧನಾ ವರದಿಗಳು, ಚಾರ್ಟುಗಳು, ಕ್ಯಾಸೆಟ್-ಸಿಡಿ ಗಳಿರಬೇಕು. ಕನ್ನಡ, ಆಂಗ್ಲ ಮತ್ತು ಹಿಂದಿ ಭಾಷೆಯ ಪ್ರಸಿದ್ಧ ಕವಿಗಳ ಭಾವ ಚಿತ್ರಗಳು ಮತ್ತು ಅವರ ಪರಿಚಯ ಹಾಗೂ ಸಾಧನೆ ಚಾರ್ಟ್‌ಗಳು, ಭಾಷೆ ಕುರಿತ ಹಿರಿಯರು ಹೇಳಿರುವ ಹೇಳಿಕೆಗಳು ಗೋಡೆಗೆ ತೂಗು ಹಾಕಿದ್ದರೆ ಒಳಿತು. ಭಾಷಾ ಮಹತ್ವ ಮತ್ತು ಅಗತ್ಯವಾದ ನಿಘಂಟುಗಳು, ಪುಸ್ತಕಗಳನ್ನು ಅಲ್ಲಿ ಸಂಗ್ರಹಿಸಿಟ್ಟಿರಬೇಕು. ಭಾಷಾ ಕಲಿಕೆಗೆ ಪೂರಕವಾದ ಆಟಗಳು, ಮಾದರಿಗಳು, ಒಗಟುಗಳು ಇತ್ಯಾದಿಗಳೆಲ್ಲವನ್ನು ಅಲ್ಲಿ ಮಕ್ಕಳಿಗೆ ಸಿಗುವ ಹಾಗೆ ಇಡಬೇಕು. ಕನಿಷ್ಟ ವಾರಕ್ಕೊಮ್ಮೆಯಾದರೂ ಮಕ್ಕಳು ಅ ಕೊಠಡಿಯಲ್ಲಿ ಒಂದು ಅವಧಿಯನ್ನು ಕಳೆಯಬೇಕು. ಈ ಪ್ರಯೋಗಾಲಯದಲ್ಲಿ ಮಕ್ಕಳು ತಮ್ಮೊಳಗೆ ಮಾತನಾಡಿಕೊಳ್ಳಲು, ಚರ್ಚೆಮಾಡಲು, ಒಟ್ಟಿಗೆ ಕೆಲಸಮಾಡಲು ಮತ್ತು ಸಂವಹನ ಮಾಡುವಂತಾಗಬೇಕು.

ಮಕ್ಕಳು ಸ್ವತಃ ತಮ್ಮಗಳ ಧ್ವನಿಗಳನ್ನು ಮುದ್ರಿಸಿ, ಮತ್ತೆ ಮತ್ತೆ ಆಲಿಸಲು ಸೂಕ್ತ ಉಪಕರಣಗಳು ಅಗತ್ಯ. ಭಾಷೆಯ ಮೇಲಿನ ವಿವಿಧ ಯೋಜನೆಗಳನ್ನು ಪೂರ್ಣಗೊಳಿಸಲು ಅಗತ್ಯವಾದ ಸಾಮಾಗ್ರಿಗಳು ಕೈಗೆ ನಿಲುಕಬೇಕು. ಮಕ್ಕಳು ಭಾಷೆಯ ಮೇಲೆ ಕೈಗೊಳ್ಳುವ ಎಲ್ಲಾ ಪ್ರಯೋಗಗಳನ್ನು ದಾಖಲಿಸುವ ಮತ್ತು ಅದನ್ನು ಒರೆಗೆ ಹಚ್ಚಲು ಅನುವು ಮಾಡಿಕೊಡಬೇಕು. ಪ್ರಯೋಗಾಲದ ಬಳಕೆ ಕುರಿತು ದಾಖಲೆ ನಿರ್ವಹಣೆಯಾಗಬೇಕು. ಸಾಧ್ಯವಾದರೆ ಕತ್ತರಿ, ಡ್ರಾಯಿಂಗ್ ಹಾಳೆ, ಗಂ, ಟೇಪ್. . . .ಮುಂತಾದವುಗಳ ಕಿಟ್ ಇದ್ದು ಮಕ್ಕಳು ಮುಕ್ತವಾಗಿ ಬಳಸುವಂತಿದ್ದರೆ ಒಳಿತು. ಹಾಗಾದಲ್ಲಿ ಮಾತ್ರ ಎಲ್ಲಾ ಭಾಷೆಗಳು ಸರಳ, ಆನಂದಮಯ ಹಾಗು ಅರ್ಥಪೂರ್ಣವಾಗುತ್ತದೆ.

**ಬಳಕೆಯ ಅವಕಾಶಗಳು:-**

ಮಕ್ಕಳಷ್ಟೆ ಅಲ್ಲದೇ ಶಿಕ್ಷಕರು ತಮ್ಮ ಬೋಧನಾ ಸಮಯದಲ್ಲಿ ಭಾಷಾ ಪ್ರಯೋಗಾಲಯಗಳನ್ನು ಬಳಸಿಕೊಳ್ಳಬಹುದು. ಉದಾ:ರಾಗ ಬದ್ಧವಾಗಿ ಪದ್ಯಗಳ ಹಾಡುವಿಕೆ, ಕವಿಗಳ ಜೀವನ ಚರಿತ್ರೆ ಅಥವಾ ಸಂದರ್ಶನಗಳು ಇತ್ಯಾದಿ. ಮಕ್ಕಳು ತಮಗೆ ಸಮ್ಸಯೆ ಬಂದಾಗ ತಾವೇ ಸ್ವತಃ ಅದನ್ನು ಅಧ್ಯಯನ ಮಾಡಿ ಪರಿಹಾರ ಕೈಗೊಳ್ಳಲು ಶಿಕ್ಷಕರು ಪ್ರೇರೇಪಿಸಬಹುದು. ಜೊತೆಗ ಅಲ್ಲಿನ ಕಲಿಕೆಗೆ ಪೂರಕವಾದ ಸಾಹಿತ್ಯ, ಪುಸ್ತಕ, ಅಂತರ್ಜಾಲದ ಮಾಹಿತಿಗಳನ್ನು ಮಕ್ಕಳಿಗೆ ನೀಡಿ, ಶಿಕ್ಷಕರು ಉಸ್ತುವಾರಿ ಮತ್ತು ಮಾರ್ಗದರ್ಶನ ಮಾಡಬಹುದು. ಭಾಷಾ ಪ್ರಯೋಗಾಲಯದ ಬಳಕೆ ಪ್ರತಿ ಕ್ಷಣದಲ್ಲಿಯೂ ಮಡುತ್ತಾ, ಅದರ ನೆರವಿನಿಂದ ಮಕ್ಕಳ ಕಲಿಕೆಯನ್ನು ಗಟ್ಟಿಗೊಳಿಸಬಹುದು.

**ಮುಗಿಸುವ ಮುನ್ನ**

ಭಾಷಾ ಕಲಿಕೆಯ ದೋಷವನ್ನ ನಿವಾರಿಸಿಕೊಳ್ಳಲೇಬೇಕು. ಹಾಗಾಗಿ ನಾವು ಇನ್ನಾದರು ಆ ನಿಟ್ಟಿನಲ್ಲಿ ಸಾಗಬೇಕಾದಲ್ಲಿ ಭಾಷಾ ಪ್ರಯೋಗಾಲಯ ನಮಗೆ ಮುಖ್ಯ ಅಸ್ತ್ರವಾಗುವುದರಲ್ಲಿ ಅನುಮಾನವೇ ಇಲ್ಲ. ಭಾಷಾ ಪ್ರಯೋಗಾಲಯ ನಿರ್ಮಿಸಿದರೆ ನಮ್ಮ ಕೆಲಸ ಮುಗಿದಂತಲ್ಲ ಅದನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಡುವುದು ಅಷ್ಟೇ ಮುಖ್ಯವಾದ ಕೆಲಸ. ಭಾಷಾ ಪ್ರಯೋಗಾಲಯದ ಕುರಿತು ಹೆಚ್ಚಿನ ಮಹಿತಿಗೆ www.languagelab.com ನಲ್ಲಿ ಜಾಲಾಡಬಹುದು.

# ಕಾಂಗ್ರೆಸ್ ಅಭ್ಯರ್ಥಿ ಡಾ.ಚಂದ್ರಶೇಖರ ಪಾಟೀಲ ಗೆಲುವು

**ಮೊದಲ ಪುಟದಿಂದ**

ವಿನ್ನಿಂಗ್ ಕೋಟಾ ನಿಗದಿ ಮಾಡಿ ಚುನಾವಣಾಧಿಕಾರಿ ಕೃಷ್ಣ ಭಾಜಪೇಯಿ ಅವರು ಘೋಷಿಸಿದರು.

ತದನಂತರ ನಡೆದ ಎರಡನೇ ಪ್ರಾಶಸ್ತ್ಯ ಮತ ಎಣಿಕೆಯಲ್ಲಿ ಪ್ರಥಮ ಪ್ರಾಶಸ್ತ್ಯ ಮತದಲ್ಲಿ ಅತ್ಯಂತ ಕಡಿಮೆ ಮತ ಪಡೆದ ಸ್ವತಂತ್ರ ಅಭ್ಯರ್ಥಿಗಳಾದ ಎ.ಎಸ್.ನಾಗನಹಳ್ಳಿ ರಿಂದ ಹಿಡಿದು ಎನ್.ಪ್ರತಾಪ ರೆಡ್ಡಿ ವರೆಗೆ 17 ಅಭ್ಯರ್ಥಿಗಳನ್ನು ಹಂತ-ಹಂತವಾಗಿ ಸ್ಪರ್ಧೆಯಿಂದ ಎಲಿಮಿನೇಟ್ ಮಾಡಿ ಅವರಿಗೆ ನೀಡಲಾದ ಮತದಲ್ಲಿನ ಎರಡನೇ ಪ್ರಾಶಸ್ತ್ಯ ಮತಗಳನ್ನು ಮೇಲಿನ ಅಭ್ಯರ್ಥಿಗಳ ಲೆಕ್ಕಕ್ಕೆ ತೆಗೆದುಕೊಳ್ಳಲಾಯಿತು. ಹೀಗೆ ಎರಡನೇ ಪ್ರಾಶಸ್ತ್ಯ ಮತ ಎಣಿಕೆ ಮುಕ್ತಾಯದ ನಂತರ ಕಾಂಗ್ರೆಸ್ ಅಭ್ಯರ್ಥಿ ಡಾ.ಚಂದ್ರಶೇಖರ ಪಾಟೀಲ ಅವರು 3,988 ಮತ್ತು ಬಿ.ಜೆ.ಪಿ. ಅಭ್ಯರ್ಥಿ ಅಮರನಾಥ ಪಾಟೀಲ ಅವರು 3,783 ಎರಡನೇ ಪ್ರಾಶಸ್ತ್ಯದ ಮತಗಳನ್ನು ಪಡೆದರೆ, 14,201 ಮತಗಳು ಎಕ್ಸಾಸ್ಟ್ ಗೊಂಡವು. ಪ್ರಥಮ ಪ್ರಾಶಸ್ತ್ಯ ಮತದಲ್ಲಿ ಅರಂಭಿಕ ಎರಡು ಸುತ್ತು ಹೊರತುಪಡಿಸಿ ಉಳಿದ 6 ಸುತ್ತುಗಳಲ್ಲಿ ಮುನ್ನಡೆ ಸಾಧಿಸಿದ ಡಾ.ಚಂದ್ರಶೇಖರ ಪಾಟೀಲ ಎರಡನೇ ಪ್ರಾಶಸ್ತ್ಯ ಮತದಲ್ಲು 205 ಮತಗಳನ್ನು ಲೀಡ್ ಪಡೆದುಕೊಂಡರು.

ಅಂತಿಮವಾಗಿ ಎರಡನೇ ಪ್ರಾಶಸ್ತ್ಯ ಮತ ಎಣಿಕೆ ನಂತರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿ ಡಾ.ಚಂದ್ರಶೇಖರ ಪಾಟೀಲ-43,484 ಮತಗಳನ್ನು ಪಡೆದು, 4,651 ಮತಗಳಿಂದ ಗೆಲುವಿನ ನಗೆ ಬೀರಿದರು. ಬಿ.ಜೆ.ಪಿ ಅಭ್ಯರ್ಥಿ ಅಮರನಾಥ ಪಾಟೀಲ-38,833, ಸ್ವತಂತ್ರ ಅಭ್ಯರ್ಥಿಗಳಾದ ಎನ್.ಪ್ರತಾಪ ರೆಡ್ಡಿ-17,651, ಅನಿಮೇಶ್ ಮಹಾರುದ್ರಪ್ಪ ಅಂದವಾಡೆ-113, ಅಬ್ದುಲ್ ಜಬ್ಬಾರ ಗೋಳಾ-243, ಕಾಶಿನಾಥ ಎಂ. ಗಿಲೇರಿ-295, ಬಸವರಾಜ ಮ್ಯಾಗಲಮನಿ-59, ಮಹೆಬೂಬ್ ಮೊಹಮ್ಮದ್ ಖಾಜಾ ಹುಸೇನ್ ವಂಟೇಲಿ-57, ಎಂ.ಜಾವಿದ್ ಹುಸೇನ್-212, ರಿಯಾಜ್ ಅಹ್ಮದ-75, ವಿಲಾಸ ಎಂ. ಕಣಮಸ್ಕರ್-914, ಶರಣಬಸಪ್ಪ ಪಿ. ಸುಗೂರ-1,796, ಎ.ಶರಣ ಐ.ಟಿ-73, ಎ.ಎಸ್.ನಾಗನಹಳ್ಳಿ-17, ಶಿವಕುಮಾರ ಹಿರೇಮಠ-177,ಸತೀಶಕುಮಾರ ಕೋಬಾಳಕರ್-809, ಸಾಯಿನಾಥ ನಾಗೇಶ್ವರ ಮೇದಾ-72, ಡಾ.ಸುನೀಲಕುಮಾರ ಎಚ್. ವಂಟಿ-120 ಹಾಗೂ ಸುರೇಶ ದವಿದಪ್ಪ-135 ಮತಗಳು ಪಡೆದರು.

ಸುದೀರ್ಘ 27 ಗಂಟೆ ಎಣಿಕೆ ಕಾರ್ಯ: ಗುರುವಾರ ಬೆಳಿಗ್ಗೆ 8 ಗಂಟೆಗೆ ಆರಂಭವಾದ ಮತ ಎಣಿಕೆ ಪ್ರಕ್ರಿಯೆ ಸಂಜೆ 4 ಗಂಟೆ ವರೆಗೂ ಕ್ಷೇತ್ರದ ಎಲ್ಲಾ ಮತಗಳನ್ನು ರ್‍ಯಾಂಡಮೈಜೇಷನ್ ಮಾಡಿ ತಲಾ 25 ಮತಗಳನ್ನು ಕಟ್ಟು ಕಟ್ಟುವ ಕೆಲಸ ನಡೆಯಿತು. ನಂತರ ಸಂಜೆ 4 ಗಂಟೆಯಿಂದ 14 ಟೇಬಲ್ ನಲ್ಲಿ ಪ್ರಥಮ ಪ್ರಾಶಸ್ತ್ಯ ಮತ ಎಣಿಕೆ ಆರಂಭವಾಗಿ ಶುಕ್ರವಾರ ಬೆಳಿಗ್ಗೆ 6 ಗಂಟೆ ವರೆಗೆ 8 ಸುತ್ತಿನಲ್ಲಿ ಕೊನೆಗೊಂಡಿತ್ತು. ತದನಂತರ ಎರಡನೇ ಪ್ರಾಶಸ್ತ್ಯ ಮತ ಎಣಿಕೆ ಬೆಳಿಗ್ಗೆ 11 ಗಂಟೆ ವರೆಗೆ ಸಾಗಿತು. ಸಂಪೂರ್ಣ ಮತ ಎಣಿಕೆ ಪ್ರಕ್ರಿಯೆ ಸುದೀರ್ಘ 27 ಗಂಟೆಗಳ ನಿರಂತರವಾಗಿ ನಡೆಯಿತು.

ಶೇ.88.52 ಪುರಸ್ಕೃತ ಮತ: ಒಟ್ಟು ಚಲಾವಣೆಯಾದ ಮತ ಪ್ರಮಾಣ ಗಮನಿಸಿದಾಗ ಶೆ.88.52ರಷ್ಟು ಮತ ಪುರಸ್ಕೃತವಾದರೆ ಶೇ.11.48 ಮತಗಳು ತಿರಸ್ಕರಿಸಲ್ಪಟ್ಟಿವೆ. ಇನ್ನು ತಿರಸ್ಕೃತ ಮತಗಳು ಗಮನಿಸಿದಾಗ ಅದರಲ್ಲಿ ಚಿನ್ಹೆ ನಮೂದು, ಸಂಖ್ಯಾತ್ಮಕ ಬದಲು ಅಕ್ಷರದಲ್ಲಿ ಆದ್ಯತಾ ನಮೂದು, ಖಾಲಿ ಮತ ಪತ್ರ ಹಾಕಿರುವುದು, ಆದ್ಯತಾ ಸಂಖ್ಯೆ ಪುನರಾವರ್ತನೆ, ಬಾಲ್ ಪೆನ್ ನಿಂದ ಆದ್ಯತಾ ಸಂಖ್ಯೆ ನಮೂದು ಮಾಡಿರುವುದು ಕಂಡುಬಂದಿದೆ.

ಮತ ಎಣಿಕೆ ಹಿನ್ನೆಲೆಯಲ್ಲಿ ಎಣಿಕೆ ಸುತ್ತಮುತ್ತ ಸೂಕ್ತ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಮುಂಜಾಗ್ರತಾ ಕ್ರಮವಾಗಿ 144 ನಿಷೇಧಾಜ್ಞೆ ಸಹ ಜಾರಿ ಮಾಡಲಾಗಿತ್ತು.

ಕಲಬುರಗಿ, ಬೀದರ, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ, ವಿಜಯನಗರ ಜಿಲ್ಲಾ ವ್ಯಾಪ್ತಿ ಹೊಂದಿರುವ ಈ ಕ್ಷೇತ್ರದಲ್ಲಿ 99,121 ಪುರುಷರು, 57,483 ಮಹಿಳೆಯರು, ಇತರೆ 19 ಸೇರಿ ಒಟ್ಟು 1,56,623 ಜನ ಮತದಾರರು ಮತದಾನಕ್ಕೆ ಅರ್ಹತೆ ಪಡೆದಿದ್ದರು. ಇದರಲ್ಲಿ ಶೇ.69.61 ರಷ್ಟು ಅಂದರೆ 1,09,031ಜನ ಮತದಾರರು ಕಳೆದ ಜೂನ್ 3 ರಂದು ನಡೆದ ಮತದಾನದಲ್ಲಿ ತಮ್ಮ ಹಕ್ಕು ಚಲಾಯಿಸಿದ್ದರು.

ಈಶಾನ್ಯ ಕರ್ನಾಟಕ ಪದವೀಧರ ಕ್ಷೇತ್ರದ ಸಾಮಾನ್ಯ ವೀಕ್ಷಕ ಎಂ.ಮಹೇಶ್ವರ ರಾವ್ ಅವರ ಸಮಕ್ಷಮ ಮತ ಎಣಿಕೆ ಸುಸೂತ್ರವಾಗಿ ನಡೆಯಿತು. ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಗಳಾದ ಕಲಬುರಗಿ ಡಿ.ಸಿ. ಬಿ.ಫೌಜಿಯಾ ತರನ್ನುಮ್, ಯಾದಗಿರಿ ಜಿಲ್ಲಾಧಿಕಾರಿಗಳಾದ ಡಾ.ಸುಶೀಲಾ ಬಿ., ಬೀದರ ಜಿಲ್ಲಾಧಿಕಾರಿಗಳಾದ ಗೋವಿಂದರೆಡ್ಡಿ, ರಾಯಚೂರು ಜಿಲ್ಲಾಧಿಕಾರಿಗಳಾದ ಚಂದ್ರಶೇಖರ ನಾಯಕ್, ಕೊಪ್ಪಳ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಬಳ್ಳಾರಿ ಜಿಲ್ಲಾಧಿಕಾರಿಗಳಾದ ಪ್ರಶಾಂತಕುಮಾರ ಮಿಶ್ರಾ, ಅಪರ ಪ್ರಾದೇಶಿಕ ಆಯುಕ್ತ ಇಲಿಯಾಸ್ ಅಹ್ಮದ್ ಇಸಾಮದಿ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಮತ ಎಣಿಕೆ ಅಧಿಕಾರಿ-ಸಿಬ್ಬಂದಿಗಳು ಮತ ಎಣಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

ಕವಿ ಮನಸು

## ಮಾಯಾಲೋಕ



ಕಲಾವಿದನ ಕೈಚಳಕದಿ ಮೂಡಿದ ಚಿತ್ರ
ಸುಂದರವೆಂದು ಅನಿಸಿದರೂ ಬಹಳ ವಿಚಿತ್ರ
ಪ್ರಕೃತಿಯ ಮಡಿಲಲ್ಲಿ ಬಾಳುವುದು ಪವಿತ್ರ
ದುರಾಸೆಯಿಂದ ರೂಪಿಸದಿರು ಮನುಜ
ಷಡ್ಯಂತ್ರ

ಎಣಿಸಲಸಾಧ್ಯ ಮತ್ಸ್ಯದ ಹೆಜ್ಜೆಯ ಗುರುತು
ಬೆರಗಾಗಿದೆ ಹರಿಣವು ನಾಗಲೋಟವ
ಮರೆತು
ಸೌಂದರ್ಯವೆಲ್ಲವೂ ತನ್ನಯ ಸ್ವತ್ತೆನ್ನುತ್ತಿದೆ
ಮಯೂರವು
ಕರ್ಣಾನಂದ ಆಗುವುದು ಪಕ್ಷಿಗಳ
ಕಲರವವು

ಸೂಸುತಿರಲು ಸುಗಂಧವ ಪುಷ್ಪಗಳು
ಸುತ್ತಲು
ಮನಕೆ ಮುದ ನೀಡುವ ಹರುಷದ
ಹೊನಲು
ಮರಗಿಡಗಳು ತುಂಬುತ್ತಿದೆ ವನಸಿರಿಯ
ಮಡಿಲು
ಕಣ್ಣಾಗಿ ಕಾಪಾಡಿಕೊಳ್ಳಿ ಪರಿಸರದ ಒಡಲು

– ಚೇತನ ಭಾರ್ಗವ ಬೆಂಗಳೂರು

## ಕುತ್ತಿಗೆ ಸೀಳಿ.. ಹಾಲನು ಕುಡಿವೆ.




ಕುತ್ತಿಗೆ ಕಡಿಯಲು ಇರಿಸಿದ ಕತ್ತಿಯ
ಹಾಲನು ಖುಷಿಯಲಿ ಕುಡಿಯುತಿಹ
ಕತ್ತಿಯ ಹರಿತಕೆ ಸೀಳಿದ ಕುತ್ತಿಗೆ
ಮತ್ತದು ಪಡೆಯದು ಮರುಜೀವ

ಬೆಳೆದಿಹ ವೃಕ್ಷದ ಕಾಂಡವ ಕಡಿಯುತ
ನಡುವಲಿ ಇವನಿಗೆ ದಣಿವಾಯ್ತೆ
ಬಳಲಿಕೆ ಕಳೆಯಲು ನೆರಳನು ನೀಡುವ
ವೃಕ್ಷದ ನೆರವದು ಮರೆತೋಯ್ತೆ

ಅಡೆತಡೆ ಇಲ್ಲದೆ ಅನುದಿನ ಮಾನವ
ಮಾಡುವ ಗಾಳಿಯ ಮಾಲಿನ್ಯ
ಜರಡಿಯನಾಡುತ ಶುದ್ಧದ ಗಾಳಿಯ
ನಮಗದು ಕೊಡುವುದು ಪ್ರತಿನಿತ್ಯ

ಗಿಡವನು ನೆಡುವುದು ಪುಣ್ಯದ ಕಾರ್ಯವು
ಆಗದೆ ಹೋದರೆ ಸುಮ್ಮನಿರು
ಪೀಳಿಗೆಗಾಗಿಯೆ ಇರುವುದ ಉಳಿಸಿಕೊ
ನೀಡದೆ ಉಳಿಯದು ಅದು ಉಸಿರು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201

# ದೈವದತ್ತ ಕೊಡುಗೆಗಳು

ಐಷಾರಾಮಿ ಹಾಸಿಗೆಯ ಮೇಲೆ ಮಲಗಬಹುದು.... ನಿದ್ದೆಯನ್ನು ಕೊಳ್ಳಲು ಸಾಧ್ಯವಿಲ್ಲ, ಮೃಷ್ಟಾನ್ನ ಭೋಜನ ತಟ್ಟೆಯಲ್ಲಿಹುದು..... ಆದರೆ ಹಸಿವಿಲ್ಲ, ಜಗತ್ತಿನ ಎಲ್ಲ ಸುಖಗಳು ಅಂಗೈಯಲ್ಲಿ ಸಿಗಬಹುದು.....ಅನುಭವಿಸಲು ಆರೋಗ್ಯವಿಲ್ಲ ಹಾಗಾದರೆ ಓರ್ವ ವ್ಯಕ್ತಿಗೆ ಬದುಕಿನಲ್ಲಿ ಮುಖ್ಯವಾಗಿ ಬೇಕಾದದ್ದು ಯಾವುದು? ಎಲ್ಲವೂ ಇದ್ದು ಏನೂ ಇಲ್ಲದಂತಹ ಮಾನಸಿಕ ವಿಷಣ್ಣತೆ ಮನುಷ್ಯನನ್ನು ಕಾಡುವುದಾದರೂ ಏಕೆ? ಇದಕ್ಕೆ ಪರಿಹಾರಗಳು ಉಂಟೆ? ಖಂಡಿತವಾಗಿಯೂ... ಒಂದು ಸೂಕ್ಷ್ಮ ಜೀವಕೋಶದಿಂದ ಉದಿಸಿದ, ಒಂದು ಹತ್ತಾಗಿ ಹತ್ತು ಇಪ್ಪತ್ತಾಗಿ ಲಕ್ಷಾಂತರ ಜೀವಕೋಶಗಳ ಹೊಂದಿರುವ ಮನುಷ್ಯನ ನಿಜವಾದ ಅವಶ್ಯಕತೆಗಳು ಬಹಳವೇ ಕಡಿಮೆ. ತಾನು ತನ್ನದು ತನಗಾಗಿ ಎಂದು ಆತ ವೈಯುಕ್ತಿಕ ಪರಿಧಿಯಲ್ಲಿ ಯೋಚಿಸಲಾರಂಭಿಸಿದರೆ ಈ ಭೂಮಿಯ ಮೇಲಿರುವ ಎಲ್ಲವೂ ಆತನ ಬೇಡಿಕೆಯ ಪರಿಧಿಯಲ್ಲಿ ಬರುತ್ತದೆ.

ಮೂಲಭೂತವಾಗಿ ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರುವುದು... ಒಂದೊಳ್ಳೆಯ ಆರೋಗ್ಯ, ಸೊಂಪಾದ ನಿದ್ರೆ, ಪೌಷ್ಟಿಕ ಆಹಾರ, ಪ್ರಕೃತಿಯೊಂದಿಗೆ ಒಡನಾಟ, ತನ್ನವರ ಪ್ರೀತಿ ವಿಶ್ವಾಸ, ಸಮಯ ಮತ್ತು ತನ್ನಿಚ್ಛೆಯಂತೆ ಬದುಕುವ ಸ್ವಾತಂತ್ರ್ಯ.... ಇ ವುಗಳಲ್ಲಿ ಕೆಲವನ್ನು ವೈಯುಕ್ತಿಕ ಸಾಧನೆಯ ಮೂಲಕ ಸಂಪಾದಿಸಿಕೊಂಡರೆ ಮತ್ತೆ ಕೆಲವು ದೈವದತ್ತ ಕೊಡುಗೆಗಳು. ಆದರೆ ಇವುಗಳ ನಡುವೆ ಪರಸ್ಪರ ಸಂಬಂಧವಿದೆ.

ಅದೆಷ್ಟೇ ಒಳ್ಳೆಯ ವಿದ್ಯೆ ಉದ್ಯೋಗಗಳನ್ನು ಹೊಂದಿದ್ದರೂ, ಸಾಮಾಜಿಕವಾಗಿ ಉನ್ನತ ಸ್ಥಾನಮಾನಗಳನ್ನು ಹೊಂದಿದ್ದರೂ ನಾವು ಮಾಡುವ ಕೆಲಸದಲ್ಲಿ ತೃಪ್ತಿ, ಸಮಾಧಾನಗಳು ದೊರೆಯದೆ ಹೋದಾಗ ತನ್ನಿಚ್ಛೆಯಂತೆ ಕಾರ್ಯನಿರ್ವಹಿಸುವ ಸ್ವಾತಂತ್ರ್ಯ ತನಗಿಲ್ಲದೆ ಹೋದಾಗ ಮನುಷ್ಯ ಅಶಾಂತಿಗೀಡಾಗುತ್ತಾನೆ.

ಈ ಅಶಾಂತಿ ಆತನ ಮಾನಸಿಕ ನೆಮ್ಮದಿಯನ್ನು ಕಸಿಯುತ್ತದೆ, ನಾನು ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರದಲ್ಲಿ ತೊಂದರೆಯನ್ನು ಅನುಭವಿಸುವ ಆತ ಕಂಗೆಡುತ್ತಾನೆ. ಔದ್ಯೋಗಿಕವಾಗಿ ತನ್ನ ಹಿನ್ನಡೆಯನ್ನು ವೈಯುಕ್ತಿಕ ವಾಗಿಸಿಕೊಂಡು ನಿಧಾನವಾಗಿ ಧೂಮಪಾನ, ಮದ್ಯಪಾನಗಳಂತಹ ದುಶ್ಚಟಗಳಿಗೀಡಾಗುತ್ತಾನೆ. ಇದು ಆತನ ಮನೋ ದೈಹಿಕ ಆರೋಗ್ಯ ಕೆಡಲು ಕಾರಣವಾಗುತ್ತದೆ. ಈ ಹಿಂದೆ ಗಳಿಸಿ ಬಾಚಿ ಎತ್ತಿಟ್ಟ ಹಣ ಆತನ ಆತನ ಚಟಗಳಿಗೆ ಆತನ ಆರೋಗ್ಯ ಸುಧಾರಿಸಲು ವ್ಯಯವಾಗುತ್ತದೆ.

ಇನ್ನು ಆತನ ಕುಟುಂಬಸ್ಥರಿಗೆ ಇದರ ಅರಿವಾಗುವ ಹೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ.... ಇಲ್ಲಿಯೂ ಕೂಡ ತಮ್ಮ ಅಹಮ್ಮಿನ ಕೋಟೆಯನ್ನೊಡೆದು ಯಾರಿಗೂ ತನಗಾಗುತ್ತಿರುವ ನೋವು ತೊಂದರೆಯನ್ನು ತಿಳಿಸದೇ ಇದ್ದರೆ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಇದು ಉದ್ಯೋಗಸ್ಥ ಪುರುಷರ ಕಥೆಯಾದರೆ ಹೆಣ್ಣುಮಕ್ಕಳದು ಮತ್ತೊಂದು ರೀತಿ. ಹುಟ್ಟುವಾಗಲೇ ಅಯ್ಯೋ ಹೆಣ್ಣು ಮಗು ಎಂಬ ಭಾವ ಹುಟ್ಟಿದ ಮನೆಯಲ್ಲಿದ್ದರೆ ಆಕೆ ಕೇವಲ ಆ ಮನೆಯ ಮಗಳಾಗುತ್ತಾಳೆ.... ಮುಂದೆ ಪರರ ಮನೆಗೆ ಹೋಗುವ ಸ್ವತ್ತು ಎಂಬಂತೆ ಜವಾಬ್ದಾರಿಯ ಹೊರೆಯಾಗುತ್ತಾಳೆ. ಒಂದು ಹಂತದ ವಿದ್ಯಾಭ್ಯಾಸ ಮುಗಿಸಿದ ನಂತರ ಆಕೆಗೆ ಯೋಗ್ಯ?? ವ್ಯಕ್ತಿಯೊಂದಿಗೆ ವಿವಾಹ ಮಾಡಿ ಗಂಡನ ಮನೆಗೆ ಕಳುಹಿಸಿ ಬಿಟ್ಟರೆ ತಮ್ಮ ಜವಾಬ್ದಾರಿ ಮುಗಿದಂತೆ ಎಂದು ಭಾವಿಸುವ ತಂದೆ ತಾಯಿಯ ಮಗಳಾದರೆ ಆಕೆ ಸಹಜವಾಗಿಯೇ ಕೀಳರಿಮೆಯಿಂದ ಬಳಲುತ್ತಾಳೆ. ಹುಟ್ಟಿದ ಮನೆಗೆ ಪರಕೀಯಳಾಗುವ ಆಕೆಯನ್ನು ಗಂಡನ ಮನೆಯವರು ಮತ್ತೊಂದು ಮನೆಯಿಂದ ಬಂದವಳು, ತಮ್ಮ ಮನೆಯ ತೊಟ್ಟು ಎಂಬಂತೆ ಭಾವಿಸಿದರೆ ಆಕೆಯ ಬದುಕು ಬಾಣಲಿಯಿಂದ ಬೆಂಕಿಗೆ ಬಿದ್ದಂತಾಗುತ್ತದೆ. ಇದ್ದುದರಲ್ಲಿಯೇ ತಕ್ಕಮಟ್ಟಿಗೆ ವಿದ್ಯಾಭ್ಯಾಸ ಮಾಡಿ ಒಂದೊಳ್ಳೆಯ ಉದ್ಯೋಗ ಹೊಂದಿರುವ ಹೆಣ್ಣು ಮಕ್ಕಳ ಸ್ಥಿತಿ ಕೊಂಚ ಉತ್ತಮ. ತವರು ಮತ್ತು ಗಂಡನ ಮನೆ ಎರಡರಲ್ಲಿಯೂ ಪರಕೀಯ ಪ್ರಜ್ಞೆ ಅನುಭವಿಸುವ ಹೆಣ್ಣುಮಗಳ ಮುಂದೆ ಇರುವುದು ಕೇವಲ ಎರಡು ಆಯ್ಕೆಗಳು. ಮೆಟ್ಟಿದ ಮನೆಯ ಎಲ್ಲ ಜನರ ಮನವೊಲಿಸಿ ಅವರಿಗೆ ಬೇಕು ಬೇಕಾದಂತೆ ಮಾಡಿ ಬಡಿಸಿ ಅವರ ಚಾಕರಿ ಮಾಡುವುದು ಇಲ್ಲವೇ ತನಗೆ ಬೇಕಾದಂತೆ ಅವರನ್ನು ಒಪ್ಪಿಸಿ ಬದುಕುವುದು. ಭಾರತೀಯ ಸಾಮಾಜಿಕ ಸ್ಥಿತಿಗತಿಗಳಲ್ಲಿ ಮೊದಲನೆಯ ಆಯ್ಕೆ ಅತ್ಯಂತ ಸುಲಭವಾಗಿದ್ದು ಬಹುತೇಕ ಹೆಣ್ಣು ಮಕ್ಕಳು ಸೊಲ್ಲೆತ್ತದೇ ಮೊದಲನೇ ಆಯ್ಕೆಯನ್ನು ಮಾಡಿಕೊಳ್ಳುತ್ತಾರೆ.... ಸಂಘರ್ಷಕ್ಕೆ ಎಡೆ ಮಾಡಿಕೊಡುವುದೇ ಇಲ್ಲ. ಅವರು ಕೂಡ ಜೀವನದ ಒಂದು ಹಂತದಲ್ಲಿ ಅಯ್ಯೋ ನಾವು ತಪ್ಪು ಮಾಡಿದೆವು ಎಂದು ಹಲುಬುತ್ತಾರೆ,ಸ್ವಯಂ ಕೃತ ಅಪರಾಧವಾದರೂ ಪಶ್ಚಾತಾಪ ತಪ್ಪಿದ್ದಲ್ಲ. ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಯೋಚಿಸಿ. ಆದ್ದರಿಂದ ನಾವು ಮುಖ್ಯವಾಗಿ ಯೋಚಿಸ ಬೇಕಾಗಿರುವುದು ಇಷ್ಟು.... ಈ ಭೂಮಿಗೆ ನಾವು ಬರುವಾಗ ಏನನ್ನು ತಂದಿಲ್ಲ ಹೋಗುವಾಗ ಏನನ್ನು ಒಯ್ಯುವುದಿಲ್ಲ ಇರುವವರೆಗಿನ ಈ ಜೀವನದಲ್ಲಿ ಆಯ್ಕೆ ನಮ್ಮದು.... ಕೈಗೆಟುಕದ್ದಕ್ಕೆ ಆಸೆ ಪಡದೆ ಇದ್ದುದರಲ್ಲಿಯೇ ಜೀವನ ಸಾಗಿಸಬೇಕು. ಸಾಧನೆಯ ಹಾದಿಯಲ್ಲಿ ಬರುವ ಎಲ್ಲ ಎಡರು ತೊಡರುಗಳನ್ನು ಆತ್ಮವಿಶ್ವಾಸದಿಂದ ಎದುರಿಸಬೇಕು.

ಭಗವದ್ಗೀತೆಯಲ್ಲಿನ "ಕರ್ಮಣ್ಣೇ ವಾಧಿಕಾರಸ್ತೆ ಮಾಫಲೇಶು ಕದಾಚನ" ಎಂಬ ಉಕ್ತಿನಂತೆ ನಮ್ಮ ಪಾಲಿಗೆ ಬಂದ ಕೆಲಸಗಳನ್ನು ಫಲಾ ಫಲದ ನಿರೀಕ್ಷೆಯಿಲ್ಲದೆ ನಾವು ಮಾಡಬೇಕು. ನೆನ್ನೆ ನಮ್ಮ ಕೈಯಲ್ಲಿಲ್ಲ... ನಾಳೆ ಏನಾಗುವುದು ಗೊತ್ತಿಲ್ಲ. ಆದರೆ ವರ್ತಮಾನ ಖಂಡಿತವಾಗಿಯೂ ನಮ್ಮದು ಎಂಬ ಹೊನ್ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಒಳ್ಳೆಯ ಆರೋಗ್ಯ,ಸುಖಕರ ನಿದ್ದೆ, ಆಹಾರ, ಕೌಟುಂಬಿಕ ಪ್ರೀತಿ, ಸ್ನೇಹಿತರ ಸಾಂಗತ್ಯ, ನಿಮ್ಮಿಷ್ಟದಂತೆ ಬದುಕುವ ಸ್ವಾತಂತ್ರ್ಯದಂತಹ ದೈವದತ್ತ ಕೊಡುಗೆಗಳನ್ನು ನಮ್ಮದಾಗಿಸಿಕೊಂಡು ಸಾರ್ಥಕ ಬದುಕನ್ನು ಸಾಗಿಸೋಣ.




# ಚುರುಕುಗೊಂಡ ಕೃಷಿ ಚಟುವಟಿಕೆ

## 67,478 ಮೆ.ಟನ್ ರಸಗೊಬ್ಬರ 16,223 ಕ್ವಿಂಟಾಲ್ ಬಿತ್ತನೆ ಬೀಜ ದಾಸ್ತಾನು

### ಜಂಟಿ ಕೃಷಿ ನಿರ್ದೇಶಕ ತಿರುಮಲೇಶ್ ಹೇಳಿಕೆ । ಬೀಜ ಗೊಬ್ಬರ ವಿತರಣೆ ಸುಗಮ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ ಮುಂಗಾರು ಮಳೆಯು ರೈತರ ಮೊಗದಲ್ಲಿ ನೆಮ್ಮದಿ ಮತ್ತು ಸಂತಸ ಮೂಡಿಸಿದೆ. ಪ್ರಸ್ತುತ ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆಗಳು ಅತ್ಯಂತ ಬಿರುಸಿನಿಂದ ನಡೆಯುತ್ತಿದ್ದು, ಜಿಲ್ಲೆಯಲ್ಲಿ 67,478 ಮೆಟ್ರಿಕ್ ಟನ್ ರಸಗೊಬ್ಬರ ಹಾಗೂ 16,223 ಕ್ವಿಂಟಲ್ ಬಿತ್ತನೆ ಬೀಜದ ದಾಸ್ತಾನು ಮಾಡಲಾಗಿದ್ದು, ಬಿತ್ತನೆ ಬೀಜ ಹಾಗೂ ರಸಗೊಬ್ಬರದ ವಿತರಣೆ ಕಾರ್ಯವು ಸುಗಮವಾಗಿ ನಡೆಯುತ್ತಿದೆ ಎಂದು ಜಂಟಿ ಕೃಷಿ ನಿರ್ದೇಶಕ ತಿರುಮಲೇಶ್ ಅವರು ತಿಳಿಸಿದ್ದಾರೆ.

**ಮಳೆಯ ವಿವರ:** ಜಿಲ್ಲೆಯ ವಾರ್ಷಿಕ ಮಳೆಯು 599.9 ಮಿ.ಮೀ ಇದೆ. 2024 ರ ಜನವರಿಯಿಂದ ಜೂ.01 ರ ವರೆಗೆ 81.5 ಮಿ.ಮೀ ವಾಡಿಕೆ ಮಳೆಯಾಗಬೇಕಿದ್ದು, ವಾಸ್ತವವಾಗಿ 119.9 ಮಿ.ಮೀ (ಶೇ.47.1) ಮಳೆ ಸುರಿದಿತ್ತು. ಬಳಿಕ ಮೇ 28 ರಿಂದ ಜೂ.06 ರ ವರೆಗಿನ 07 ದಿನಗಳಲ್ಲಿ 14.3 ಮಿ.ಮೀ ವಾಡಿಕೆ ಮಳೆಗಿಂತ 48.0 ಮಿ.ಮೀ ಮಳೆ (ಶೇ.235.7) ಸುರಿದಿದೆ. ಇದರಿಂದಾಗಿ ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆಗಳು ಹೆಚ್ಚು ಭರದಿಂದ ನಡೆಯುತ್ತಿವೆ.

**ಬಿತ್ತನೆ ಬೀಜ:** ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಭತ್ತ, ಜೋಳ, ಮೆಕ್ಕೆಜೋಳ,



ಸೂರ್ಯಕಾಂತಿ, ಶೇಂಗಾ, ತೊಗರಿ, ರಾಗಿ ಸೇರಿ ಒಟ್ಟು 16,223 ಕ್ವಿಂಟಾಲ್ ಬಿತ್ತನೆ ಬೀಜದ ಬೇಡಿಕೆ ಇದ್ದು, ಕೆ.ಎಸ್.ಎಸ್.ಸಿ., ಎನ್.ಎಸ್.ಸಿ., ಕೆ.ಓ.ಎಫ್ ಸಂಸ್ಥೆಗಳು ಹಾಗೂ ಖಾಸಗಿ ಬಿತ್ತನೆ ಬೀಜ ಸರಬರಾಜುದಾರ ಸಂಸ್ಥೆಗಳಲ್ಲಿ 32,789 ಕ್ವಿಂಟಾಲ್ ಬಿತ್ತನೆ ಬೀಜ ದಾಸ್ತಾನಿದೆ. ರೈತರ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗಿದೆ. ವಿತರಣೆ ಕಾರ್ಯ ಪ್ರಾರಂಭವಾಗಿದ್ದು, 299 ಕ್ವಿಂಟಾಲ್ ಬಿತ್ತನೆ ಬೀಜ ವಿತರಣೆಯಾಗಿದೆ. ಜಿಲ್ಲೆಯಲ್ಲಿ 4,00,043 ಹೆಕ್ಟರ್ ಭೌಗೋಳಿಕ ಪ್ರದೇಶವಿದ್ದು, 2,78,227 ಹೆಕ್ಟರ್ ಸಾಗುವಳಿಗೆ ಸಜ್ಜಾಗಿದೆ. ಒಟ್ಟು 1,59,662 ರೈತರು ಸಾಗುವಳಿದಾರರಿದ್ದು, ಆ ಪೈಕಿ 69,825 ಅತೀ ಸಣ್ಣ ರೈತರು, 44,046 ಸಣ್ಣ ರೈತರು, 44,210 ಮದ್ಯಮ ರೈತರು ಹಾಗೂ 1,581 ದೊಡ್ಡ ರೈತರಿದ್ದಾರೆ.

**ಬಿತ್ತನೆ ಕ್ಷೇತ್ರ:** ಜಿಲ್ಲೆಯಲ್ಲಿ ಪ್ರಸ್ತಕ ಸಾಲಿನ ಮುಂಗಾರಿಗೆ 1,73,897 ಹೆಕ್ಟರ್ ಪ್ರದೇಶ ಬಿತ್ತನೆ ಗುರಿ ಇದ್ದು, ಇಲ್ಲಿಯವರೆಗೆ 366 ಹೆಕ್ಟರ್ ಪ್ರದೇಶ ಬಿತ್ತನೆಯಾಗಿದ್ದು, ಶೇ.0.21 ರಷ್ಟು ಪ್ರಗತಿಯಾಗಿದೆ.

**ರಸಗೊಬ್ಬರ:** ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಯೂರಿಯಾ, ಡಿ.ಎ.ಪಿ ಹಾಗೂ ಕಾಂಪ್ಲೆಕ್ಸ್ ಸೇರಿ ಒಟ್ಟು 1,13,167 ಮೆಟ್ರಿಕ್ ಟನ್ ರಸಗೊಬ್ಬರ ಬೇಡಿಕೆ ಇದ್ದು, ಖಾಸಗಿ ಡೀಲರ್ಸ್, ಕೆ.ಎಸ್.ಎಸ್.ಸಿ ಹಾಗೂ ಮಾರುಕಟ್ಟೆ ಫೆಡರಷನ್ ಮೂಲಕ 70,243 ಮೆಟ್ರಿಕ್ ಟನ್ ರಸಗೊಬ್ಬರ ಸರಬರಾಜಾಗಿದೆ ಮತ್ತು 2,765 ಮೆಟ್ರಿಕ್ ಟನ್ ವಿತರಣೆಯಾಗಿದ್ದು, 67,478 ಮೆಟ್ರಿಕ್ ಟನ್ ರ ಕೃಷಿ ಚಟುವಟಿಕೆಗಳು ಉತ್ತಮವಾಗಿ ನಡೆಯುತ್ತಿವೆ.

ಜಿಲ್ಲೆಯ ರೈತರಿಗೆ ಭಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಯಾವುದೇ ಕೊರತೆಯಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾಕಷ್ಟು ಪ್ರಮಾಣದಲ್ಲಿ ಬೀಜ ಮತ್ತು ರಸಗೊಬ್ಬರ ದಾಸ್ತಾನು ಇದ್ದು, ರೈತರು ಯಾವುದೇ ರೀತಿಯ ಆತಂಕ, ಗೊಂದಲಪಡುವ ಅವಶ್ಯಕತೆಯಿಲ್ಲ. ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ವಿತರಣೆ ಮಾಡಲಾಗುತ್ತಿದೆ.

# ವಸತಿ ಶಾಲೆ ಪ್ರವೇಶಕ್ಕೆ ಜೂ.10ಕ್ಕೆ ಕೌನ್ಸೆಲಿಂಗ್

■ **ಹಂಪಿ ಟೈಮ್ಸ್ ಕೊಪ್ಪಳ**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ನಿರ್ವಹಣೆಯಾಗುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ 2024–25ನೇ ಸಾಲಿನಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಈಗಾಗಲೇ ಪ್ರವೇಶ ಪರೀಕ್ಷೆ ನಡೆಸಲಾಗಿದ್ದು, ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಸೀಟು ಹಂಚಿಕೆ ಮಾಡಲು ಜೂನ್ 10 ರಂದು 1ನೇ ಸುತ್ತಿನ ಕೌನ್ಸಲಿಂಗ್ ನಡೆಸಲಾಗುವುದು.

ತಳಕಲ್‌ನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಜೂನ್ 10 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಹಾಗೂ ಮಧ್ಯಾಹ್ನ 03 ಗಂಟೆಯಿಂದ 05 ಗಂಟೆಯವರೆಗೆ ಇತರೆ ಸಮುದಾಯದ ವಿದ್ಯಾರ್ಥಿಗಳಿಗೆ ಕೌನ್ಸೆಲಿಂಗ್ ನಡೆಯಲಿದೆ. ಕೌನ್ಸೆಲಿಂಗ್‌ಗೆ ಅರ್ಹತೆ ಹೊಂದಿದ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಕೊಪ್ಪಳ ಜಿಲ್ಲೆಯ ಎಲ್ಲಾ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಲ್ಲಿ ಪ್ರಕಟಿಸಲಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳು ತಪ್ಪದೇ ಕೌನ್ಸೆಲಿಂಗ್‌ಗೆ ಹಾಜರಾಗಬೇಕು.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕೌನ್ಸಲಿಂಗ್ ಸ್ಥಳದಲ್ಲಿಯೇ ಸಂಬಂಧಪಟ್ಟ ಶಾಲೆಗಳ ಪ್ರವೇಶ ದಾಖಲಾತಿ ಮಾಡಿಕೊಳ್ಳಲಾಗುವುದು ಆದ್ದರಿಂದ ವಿದ್ಯಾರ್ಥಿಗಳು ಕೌನ್ಸಲಿಂಗ್‌ಗೆ ಬರುವಾಗ ಪ್ರವೇಶ ಪರೀಕ್ಷಾ ಗುರುತಿನ ಚೀಟಿ(ಹಾಲ್‌ಟಿಕೆಟ್), ಮೂಲ ವರ್ಗಾವಣೆ ಪ್ರಮಾಣ ಪತ್ರ.(ಟಿ.ಸಿ.), ಮೂಲ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಅಂಗವಿಕಲ ಪ್ರಮಾಣ ಪತ್ರ, ವಿಶೇಷ ಮಕ್ಕಳ ಪ್ರಮಾಣ ಪತ್ರ (ಮಾಜಿ ಸೈನಿಕರು, ಸಫಾಯಿ ಕರ್ಮಚಾರಿ, ದೇವದಾಸಿ, ಅನಾಥ, ರೈತರ ಆತ್ಮಹತ್ಯೆ ಇತರೆ), 5ನೇ ತರಗತಿಯ ಮೂಲ ಅಂಕಪಟ್ಟಿ, ಆಧಾರ್ ಕಾರ್ಡ್, ಪಾಸ್‌ಪೋರ್ಟ್ ಅಳತೆಯ 4 ಭಾವಚಿತ್ರಗಳನ್ನು ಕಡ್ಡಾಯವಾಗಿ ತರಬೇಕು.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಟಣಕನಕಲ್, ತಳಕಲ್, ಕುಕನೂರು, ಕುದರಿಮೋತಿ, ಹಿರೇಬೆಣಕಲ್–1&2 ಮತ್ತು ತಾಲ್ಲೂಕು ಮಾಹಿತಿ ಕೇಂದ್ರ ಕೊಪ್ಪಳ,ಕುಷ್ಟಗಿ ಗಂಗಾವತಿ ಮತ್ತು ಯಲಬುರ್ಗಾ ಹಾಗೂ ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ ಹೊಸಪೇಟೆ ರಸ್ತೆ ಕೊಪ್ಪಳ–583231 ದೂರವಾಣಿ ಸಂಖ್ಯೆ:–08539–225070 ಈ ವಿಳಾಸಕ್ಕೆ ಸಂಪರ್ಕಿಸಬಹುದು ಎಂದು ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಖಿ ಘಟಕದ ಆವರಣದಲ್ಲಿ ಪರಿಸರ ದಿನಾಚರಣೆ

■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಆಸ್ಪತ್ರೆಯಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಖಿ ಒನ್ ಸ್ಟಾಪ್ ಸೆಂಟರ್ ಹಾಗೂ ಜಿಲ್ಲಾ ಮಹಿಳಾ ಸಬಲೀಕರಣ ಘಟಕದ ಇನ್ನರ್ ವ್ಹೀಲ್ ಕ್ಲಬ್‌ನ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜೂನ್ 05 ರಂದು ಸಖಿ ಘಟಕದ ಮುಂದೆ ಸಸಿ ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಸಖಿ ಘಟಕದ ಆಡಳಿತಾಧಿಕಾರಿ ಯಮುನಾ ಬೆಸ್ತರ್, ಜಿಲ್ಲಾ ಮಹಿಳಾ ಘಟಕದ ಸಂಯೋಜಕರಾದ ಫಾತಿಮಾ, ಸುಜಾತ, ಅನ್ನಪೂರ್ಣ, ಇನ್ನರ್ ವೀಲ್ ಕ್ಲಬ್‌ನ ಶಾರದಾ ಪಾನಘಂಟಿ ಮತ್ತು ಕಾರ್ಯದರ್ಶಿ ಸುವರ್ಣ ಘಂಟಿ, ಶಾಂತಾ ಗೌರಿಮಠ್, ನಿರ್ಮಲಾ ಪಾಟೀಲ್ ಸೇರಿದಂತೆ ಇತರರಿದ್ದರು.

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**08–06–2024 – ಶನಿವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆರಿದ್ರ |
| ಯೋಗ | : ಗಂಡ |
| ಕರಣ | : ಕೌಳವ |
| ಸೂರ್ಯೋದಯ | : 05:41:46 |
| ಸೂರ್ಯಾಸ್ತ | : 19:10:32 |
| ರಾಹು | : 09:04–10:45 |
| ಯಮಘಂಡ | : 14:07–15:48 |
| ಗುಳಿಕ | : 05:42–07:23 |

## ತುಂಗಭದ್ರಾ ನೀರಿನ ಮಟ್ಟ



**ಶುಕ್ರವಾರ : 07–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.57 ಅಡಿ |
| ಒಳ ಹರಿವು | 2190 ಕ್ಯುಸೆಕ್ |
| ಹೊರ ಹರಿವು | 6 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.817 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1581.09 ಅಡಿ |
| ಒಳ ಹರಿವು | 297 ಕ್ಯುಸೆಕ್ |
| ಹೊರ ಹರಿವು | 247 ಕ್ಯುಸೆಕ್ |
| ಸಾಮರ್ಥ್ಯ | 5.024 ಟಿಎಂಸಿ |

# ಆರೋಗ್ಯವಂತರು ರಕ್ತದಾನ ಮಾಡಿ

### ಡಿಹೆಚ್‌ಓ ಡಾ.ವೈ.ರಮೇಶಬಾಬು ಹೇಳಿಕೆ । ರಕ್ತ ಸಂಗ್ರಹಣ ಕೇಂದ್ರಕ್ಕೆ ಚಾಲನೆ

■ ಹಂಪಿ ಟೈಮ್ಸ್ ಬಳ್ಳಾರಿ

18 ವರ್ಷ ಮೇಲ್ಪಟ್ಟ ಆರೋಗ್ಯವಂತ ಪುರುಷ ಮತ್ತು ಮಹಿಳೆಯರು ತಪ್ಪದೇ ರಕ್ತದಾನ ಮಾಡಬೇಕು ಎಂದು ಡಿಎಚ್‌ಒ ಡಾ.ವೈ.ರಮೇಶ್ ಬಾಬು ತಿಳಿಸಿದರು.

ಸಂಡೂರು ತಾಲೂಕಿನ ತೋರಣಗಲ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರಕ್ತ ಸುರಕ್ಷತಾ ಟಾಸ್ಕ್ ಪೋರ್ಸ್ ಸಮಿತಿ ಹಾಗೂ ಏಡ್ಸ್ ನಿಯಂತ್ರಣ ಘಟಕದ ಅಡಿಯಲ್ಲಿ ಜಿಲ್ಲೆಯಲ್ಲಿಯೇ ಸಮುದಾಯ ಆರೋಗ್ಯ ಕೇಂದ್ರ ಮಟ್ಟದಲ್ಲಿ ಆರಂಭವಾದ ಮೊಟ್ಟ ಮೊದಲ ರಕ್ತ ಸಂಗ್ರಹಣ ಕೇಂದ್ರಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು.

ಜಿಲ್ಲೆಯಲ್ಲಿ ತಾಲ್ಲೂಕು ಆಸ್ಪತ್ರೆ, ಜಿಲ್ಲಾ ಆಸ್ಪತ್ರೆಗಳಲ್ಲಿ ರಕ್ತ ಸಂಗ್ರಹಣ ಘಟಕಗಳಿದ್ದು, ಸಮುದಾಯ ಆರೋಗ್ಯ ಕೇಂದ್ರಗಳಲ್ಲೂ ವಿಸ್ತರಿಸಲು, ಸತತ ಪ್ರಯತ್ನದ ಫಲವಾಗಿ ಪ್ರಸ್ತುತ ತೋರಣಗಲ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ರಕ್ತ ಸಂಗ್ರಹ ಘಟಕವನ್ನು ಆರಂಭಿಸಲಾಗಿದೆ ಎಂದು ತಿಳಿಸಿದರು.

ದಾನಿಗಳಿಂದ ಪಡೆದ ರಕ್ತವನ್ನು ವಿಮ್ಸ್ ಬ್ಲಡ್ ಬ್ಯಾಂಕ್ ಮೂಲಕ ಪಡೆದುಕೊಂಡು ಆದ್ಯತೆ ಮೇರೆಯ ರಕ್ತದ ಗುಂಪುಗಳ ಅನ್ವಯ ಸಂಗ್ರಹಿಸಿ ಇಡಲಾಗುವುದು. ಸಾರ್ವಜನಿಕರು ಇದರ ಸದುಪಯೋಗ ಪಡೆಯುವ ಮೂಲಕ ರಕ್ತದ ಕೊರತೆಯಾಗದಂತೆ ತಾವು ಸಹಿತ ಮುಂದೆ ಬಂದು ರಕ್ತದಾನ ಮಾಡುವ ಕಾರ್ಯಕ್ಕೆ ಕೈಜೋಡಿಸಬೇಕು ಎಂದು ವಿನಂತಿಸಿದರು.

ಜಗತ್ತಿನಲ್ಲಿ ಅತಿ ದೊಡ್ಡ ಸಂಶೋಧನೆ ಎಂದರೆ ಒಬ್ಬ ಮನುಷ್ಯನ ರಕ್ತವನ್ನು ಇನ್ನೊಬ್ಬರ ಜೀವ ಉಳಿಸಲು ಉಪಯೋಗಿಸುವುದಾಗಿದೆ. ಇದರಿಂದ ಹಲವಾರು ಜನರ ಆರೋಗ್ಯವನ್ನು ಸುಧಾರಿಸುವ ಜೊತೆಗೆ ಸಾವಿನಿಂದ ಪಾರು ಮಾಡಲು ಸಾಧ್ಯವಿದೆ. ಹಾಗಾಗಿ ರಕ್ತದಾನ ಮಾಡುವುದರಿಂದ ರಕ್ತಹೀನತೆಯಿಂದ ಬಳಲುವ ಗರ್ಭಿಣಿ ಸ್ತ್ರೀಯರಿಗೆ, ಶಸ್ತ್ರಚಿಕಿತ್ಸಾ ಹೆರಿಗೆ ವೇಳೆ, ತುರ್ತು ಶಸ್ತ್ರಚಿಕಿತ್ಸೆಗಳ ಸಂದರ್ಭದಲ್ಲಿ ಹಾಗೂ ಕ್ಯಾನ್ಸರ್ ರೋಗಿಗಳಿಗೆಥ್ಯಾಲಿಸೀಮಿಯಾ,ಹಿಮೋಫಿಲಿಯಾ ಮುಂತಾದ ರೋಗಿಗಳ ಜೀವವನ್ನು ಉಳಿಸಲು ಮುಂದೆ ಬರಬೇಕು ಎಂದರು.



ಸಂಡೂರು ತಾಲ್ಲೂಕು ನೋಡೆಲ್ ಅಧಿಕಾರಿ ಡಾ.ಆರ್.ಅಬ್ದುಲ್ಲಾ ಮಾತನಾಡಿ, ರಕ್ತವನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ, ರಕ್ತವೇ ದೇಹದ ಜೀವನಾಡಿಯಾಗಿದ್ದು,ಇನ್ನೊಬ್ಬರಿಂದ ರಕ್ತದಾನದ ಮೂಲಕ ಮಾತ್ರ ರಕ್ತವನ್ನು ಪಡೆಯಬಹುದಾಗಿದೆ ಎಂದು ಹೇಳಿದರು.

18 ರಿಂದ 60 ವರ್ಷದ ಒಳಗಿನ ಎಲ್ಲಾ ಆರೋಗ್ಯವಂತ ಪುರುಷ ಮತ್ತ ಮಹಿಳೆಯರು ರಕ್ತದಾನ ಮಾಡುವ ಅವಕಾಶವಿದ್ದು, 45 ಕೆಜಿ ಮೇಲ್ಪಟ್ಟ ಹಾಗೂ 12.5 ಗ್ರಾಮಗಿಂತ ಹೆಚ್ಚು ಹಿಮೋಗ್ಲೋಬಿನ್ ಇರುವ ಮಹಿಳೆಯರು ಪ್ರತಿ ನಾಲ್ಕು ತಿಂಗಳಿಗೊಮ್ಮೆ, ಪ್ರತಿ ಮೂರು ತಿಂಗಳಿಗೊಮ್ಮೆ ಪುರುಷರು ತಪ್ಪದೇ ರಕ್ತದಾನ ಮಾಡಬಹುದು. ಇದರಿಂದ ತಮ್ಮ ಆರೋಗ್ಯ ಉಲ್ಲಾಸ ಮಾಯವಾಗಿಸಿಕೊಳ್ಳುವುದರ ಜೊತೆಗೆ ಇನ್ನೊಬ್ಬರ ಜೀವ ಉಳಿಸಲು ಮುಂದೆ ಬರಬೇಕೆಂದು ವಿನಂತಿಸಿದರು.

ಜಿಲ್ಲಾ ಏಡ್ಸ್ ನಿಯಂತ್ರಣ ಕಾರ್ಯಕ್ರಮ ಮೇಲ್ವಿಚಾರಕ ಗಿರೀಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಆಸ್ಪತ್ರೆಯ ಸಂಚಾರ ರಕ್ತದಾನ ಘಟಕದ ಮೂಲಕ ಉಚಿತ ಸ್ವಯಂ ಪ್ರೇರಿತ ಶಿಬಿರವನ್ನು ಏರ್ಪಡಿಸಲಾಗಿದ್ದು, ಇಲ್ಲಿಯವರೆಗೂ 79 ಬಾರಿ ರಕ್ತದಾನವನ್ನು ಮಾಡಿರುವ ಎಸ್.ಕೆ ಸಿಂಗ್ ಅವರು ಶಿಬಿರದಲ್ಲಿ 80 ಬಾರಿಗೆ ರಕ್ತದಾನ ಮಾಡಿದರು. ಸಂಡೂರು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಭರತ್, ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ.ಗೋಪಾಲ್ ರಾವ್, ಪ್ರಸೂತಿ ತಜ್ಞರಾದ ಡಾ.ರಜಿಯಾ, ಮಕ್ಕಳ ತಜ್ಞ ಡಾ. ಮಣಿಕುಮಾರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಅಧೀಕ್ಷಕ ಹರ್ಷಾ, ಸಿಬ್ಬಂದಿಯವರಾದ ಶಿವರಾಮು, ಬಸವರಾಜ್, ಮಂಜುನಾಥ್, ವೆಂಕಟೇಶ್ ನಾಯ್ಕ್, ಪ್ರಶಾಂತ್, ಸೈಯದ್ ಅನ್ಸಾರಿ, ಮಾಲಾ, ಲಕ್ಷ್ಮೀ, ರೂಪಾ, ಹುಲಿಗೆಮ್ಮ ಸೇರಿದಂತೆ ಸಾರ್ವಜನಿಕರು, ತಾಯಂದಿರು, ಗರ್ಭಿಣಿಯರು ಹಾಜರಿದ್ದರು.

## ವಿಜ್ಞಾನ

# ದೇಹದಿಂದ ಹೊರಬಂದ ರಕ್ತ ಹೆಪ್ಪುಗಟ್ಟುವುದೇಕೆ?

■ ಆರ್.ಬಿ.ಗುರುಬಸವರಾಜ

ಬರಿಗಾಲಿನಲ್ಲಿ ಆಟವಾಡಲು ಹೊರಹೋಗಿದ್ದ ಸುನಿಲ ಮನೆಗೆ ಬಂದ. ಬಂದ ತಕ್ಷಣ ತಾಯಿ ಅವನ ಕಾಲನ್ನು ನೋಡಿ "ಏನೋ ಅದು ಗಾಯ, ಏನಾಯ್ತು ಕಾಲಿಗೆ?" ಎಂದು ಪ್ರಶ್ನಿಸಿದಳು. 'ಏನಿಲ್ಲ ಬಿಡಮ್ಮ, ಒಂದು ಸಣ್ಣ ಗಾಯ ಆಯ್ತು ಅಷ್ಟೆ' ಎಂದ. ಅಲ್ಲೇ ಇದ್ದ ಸುಮ "ರಕ್ತ ಹೆಪ್ಪುಗಟ್ಟಿದಂತಿದೆ!" ಎಂದಳು. ಹೌದು ಎಂದವನೆ ಗಾಯ ತೊಳೆದುಕೊಳ್ಳಲು ಬಾತ್‌ರೂಂಗೆ ಓಡಿದ. ಇತ್ತ ಸುಮ "ಅಮ್ಮ ಗಾಯವಾದಾಗ ರಕ್ತ ಹೆಪ್ಪುಗಟ್ಟುವುದೇಕೆ?" ಎಂದು ಮನದಲ್ಲಿದ್ದ ಪ್ರಶ್ನೆಯನ್ನು ಹೊರಹಾಕಿದಳು.



ಅಪಘಾತಗಳಾದಾಗ ಅಥವಾ ದೇಹದ ಹೊರಭಾಗಗಳಿಗೆ ಗಾಯವಾದಾಗ ರಕ್ತ ಬರುವುದು ಸಾಮಾನ್ಯ. ಹೀಗೆ ಹೊರ ಬಂದ ರಕ್ತವು ಕೆಲವೇ ನಿಮಿಷಗಳಲ್ಲಿ ಹೆಪ್ಪುಗಟ್ಟುತ್ತದೆ. ಅತಿಯಾದ ರಕ್ತಸ್ರಾವವನ್ನು ತಡೆಗಟ್ಟಲು ಮತ್ತು ಗಾಯದ ಗುಣಪಡಿಸುವಿಕೆಯನ್ನು ಉತ್ತೇಜಿಸಲು ನೈಸರ್ಗಿಕ ಪ್ರತಿಕ್ರಿಯೆಯಾಗಿ ದೇಹದಿಂದ ಹೊರಬಂದಾಗ ರಕ್ತ ಹೆಪ್ಪುಗಟ್ಟುತ್ತದೆ.

ಹೆಪ್ಪುಗಟ್ಟುವಿಕೆ ಪ್ರಕ್ರಿಯೆಯು ರಾಸಾಯನಿಕ ಕ್ರಿಯೆಗಳ ಸಂಕೀರ್ಣ ಸರಣಿಯನ್ನು ಒಳಗೊಂಡಿದೆ. ರಕ್ತನಾಳವು ಹಾನಿಗೊಳಗಾದಾಗ ರಕ್ತದಲ್ಲಿನ ಪ್ಲೇಟ್‌ಲೆಟ್‌ಗಳು ಸಕ್ರಿಯವಾಗುತ್ತವೆ. ತಕ್ಷಣವೇ ರಕ್ತದಲ್ಲಿನ ಪ್ಲೇಟ್‌ಲೆಟ್‌ಗಳು ಗಾಯದ ಸ್ಥಳಕ್ಕೆ ಅಂಟಿಕೊಳ್ಳಲು ಪ್ರಾರಂಭಿಸುತ್ತವೆ ಮತ್ತು ಆ ಪ್ರದೇಶಕ್ಕೆ ಹೆಚ್ಚು ಪ್ಲೇಟ್‌ಲೆಟ್‌ಗಳನ್ನು ಆಕರ್ಷಿಸುವ ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತವೆ. ಪ್ಲೇಟ್ಲೆಟ್ ಒಟ್ಟುಗೂಡಿಸುವಿಕೆ ಎಂದು ಕರೆಯಲ್ಪಡುವ ಈ ಪ್ರಕ್ರಿಯೆಯು ತಾತ್ಕಾಲಿಕ ಬಿರುಡೆಯನ್ನು ರೂಪಿಸುತ್ತದೆ. ಅದು ರಕ್ತಸ್ರಾವವನ್ನು ನಿಧಾನಗೊಳಿಸಲು ಅಥವಾ ನಿಲ್ಲಿಸಲು ಸಹಾಯ ಮಾಡುತ್ತದೆ.

ಅದೇ ಸಮಯದಲ್ಲಿ ರಕ್ತದಲ್ಲಿ ರಾಸಾಯನಿಕ ಕ್ರಿಯೆಗಳ ಸರಣಿ ನಡೆಯುತ್ತದೆ. ಈ ಸರಣಿ ಪ್ರಕ್ರಿಯೆಯಿಂದ 'ಫೈಬ್ರಿನ್' ಎನ್ನುವ ಎಳೆಗಳ ಜಾಲ ರೂಪುಗೊಳ್ಳುತ್ತದೆ. ಫೈಬ್ರಿನ್ ಒಂದು ಪ್ರೋಟೀನ್ ಆಗಿದ್ದು ಅದು ಇದು ಪ್ಲೇಟ್‌ಲೆಟ್ ಬಿರುಡೆಯನ್ನು ಸ್ಥಿರಗೊಳಿಸಲು ಮತ್ತು ಹೆಚ್ಚು ಶಾಶ್ವತ ಹೆಪ್ಪುಗಟ್ಟುವಿಕೆಯನ್ನು ರಚಿಸಲು ಸಹಾಯ ಮಾಡುತ್ತದೆ.

ಗಾಯವನ್ನು ಗುಣಪಡಿಸಲು ಮತ್ತು ಅತಿಯಾದ ರಕ್ತದ ನಷ್ಟವನ್ನು ತಡೆಗಟ್ಟಲು ಈ ಪ್ರಕ್ರಿಯೆಯು ಅವಶ್ಯಕವಾಗಿದೆ. ರಕ್ತ ಹೆಪ್ಪುಗಟ್ಟದಿದ್ದರೆ ದೇಹದಲ್ಲಿ ಅನೇಕ ತೊಂದರೆಗಳನ್ನು ತಂದೊಡ್ಡುತ್ತದೆ. ಇದು ಆಳವಾದ ರಕ್ತನಾಳದ ಥ್ರಂಬೋಸಿಸ್ (ಆಗಿಖಿ) ಅಥವಾ ಪಲ್ಮನರಿ ಎಂಬಾಲಿಸಮ್ (PE) ನಂತಹ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು.

# ಬಡತನ ನಿರ್ಮೂಲನೆಗೆ ಕೌಶಲ್ಯ ತರಬೇತಿ ಅಗತ್ಯ

### ಎಸ್.ಎಲ್.ಆರ್ ಕಂಪನಿಯ ಐಟಿ ವಿಭಾಗದ ಮುಖ್ಯಸ್ಥ ಪ್ರವೀಣ್ ಕುಮಾರ್ ಪಾಟೀಲ್ ಅಭಿಮತ

■ ಹಂಪಿ ಟೈಮ್ಸ್ ಹೊಸಪೇಟೆ

ಕೌಶಲ್ಯ ಅಭಿವೃದ್ಧಿ ಯಂತಹ ತರಬೇತಿಗಳನ್ನು ಪಡೆದುಕೊಂಡು ಪ್ರತಿಯೊಬ್ಬರು ಸ್ವಯಂ ಉದ್ಯೋಗ ಕಂಡುಕೊಳ್ಳಬೇಕೆಂದು ಎಸ್.ಎಲ್ ಆರ್ ಕಂಪನಿಯ ಐಟಿ ವಿಭಾಗದ ಮುಖ್ಯಸ್ಥ ಪ್ರವೀಣ್ ಕುಮಾರ್ ಪಾಟೀಲ್ ಹೇಳಿದರು.

ಹಗರಿಬೊಮ್ಮನಹಳ್ಳಿ ತಾಲೂಕಿನ ನಾರಾಯಣ ದೇವರಕೆರೆ ಗ್ರಾಮದಲ್ಲಿ ಗುರುವಾರ ಸಿಎಸ್‌ಆರ್ ಯೋಜನೆ ಅಡಿಯಲ್ಲಿ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ ಮತ್ತು ಎಸ್. ಎಲ್‌ಆರ್ ಮೆಟಾಲಿಕ್ಸ್ ಲೋಕಪ್ಪನಹೊಲ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಕಂಪ್ಯೂಟರ್ ತರಬೇತಿ ಮತ್ತು ಟೈಲರಿಂಗ್ ತರಬೇತಿ ಕಾರ್ಯಕ್ರಮಕ್ಕರ ಚಾಲನೆ ನೀಡಿ ಮಾತನಾಡಿ, ತಾಂತ್ರಿಕ ತರಬೇತಿಗಳನ್ನು ಪಡೆದುಕೊಂಡಾಗ ಮಾತ್ರ ನಾವು ಸ್ವಯಂ ಉದ್ಯೋಗಗಳನ್ನು ಕಂಡುಕೊಳ್ಳುವುದಕ್ಕೆ ಸಾಧ್ಯ, ಮಹಿಳೆಯರು ಆರ್ಥಿಕವಾಗಿ ಸಬಲರದಾಗ ಮಾತ್ರ ಅಭಿವೃದ್ಧಿ ಸಾಧಿಸಿದಂತಾಗುತ್ತದೆ. ಆ ನಿಟ್ಟಿನಲ್ಲಿ ನಮ್ಮ ಸಂಸ್ಥೆ ಇಂತಹ ಸಾಮಾಜಿಕ ಕೆಲಸಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ. ಹೊಲಿಗೆ ತರಬೇತಿ ಪಡೆದುಕೊಳ್ಳುವ ಮೂಲಕ ಸ್ವಯಂ ಉದ್ಯೋಗ ಕಂಡುಕೊಂಡು ಆರ್ಥಿಕವಾಗಿ ಸದೃಢವಾಗಬೇಕು, ಜತೆಗೆ ಮಹಿಳೆಯರು ಸ್ವಯಂ ಉದ್ಯೋಗ ಕಂಡುಕೊಂಡಾಗ ಆರ್ಥಿಕ ಸಮಸ್ಯೆ ಎದುರಾಗದು ಎಂದರು.

ಗ್ರಾಮದ ಮುಖಂಡ ನಾಗಪ್ಪ ಮಾತನಾಡಿ, ನಮ್ಮ ಗ್ರಾಮ ಬಸ್ ಸೌಕರ್ಯಗಳಿಂದ ವಂಚಿತವಾಗಿದ್ದ ಊರಿಗೆ ಬಂದು ಇಲ್ಲಿಯೇ ಹೊಲಿಗೆ ತರಬೇತಿ ಮತ್ತು ಕಂಪ್ಯೂಟರ್ ತರಬೇತಿಗಳನ್ನ ಉಚಿತವಾಗಿ ಕೊಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಇದಕ್ಕೆ ನಮ್ಮ ಸಹಕಾರ ಇದ್ದೇ ಇರುತ್ತದೆ, ಜತೆಗೆ ಇನ್ನಷ್ಟು ನಮ್ಮೂರಿನ ಶಾಲಾ ಮಕ್ಕಳಿಗೆ ಮತ್ತು ಗ್ರಾಮಕ್ಕೆ ಸಾಮಾಜಿಕ ಕೆಲಸಗಳನ್ನ ಮಾಡಿಕೊಡಿ ಎಂದರು.



ಗ್ರಾಮದ ಯುವಕ ಮಾತನಾಡಿ, ಇವತ್ತು ನಾವು ಎಷ್ಟೆ ವಿದ್ಯಾಭ್ಯಾಸ ಮಾಡಿದರೂ ಕೂಡ ಕಂಪ್ಯೂಟರ್ ಶಿಕ್ಷಣ ಅನಿವಾರ್ಯವಾಗಿದೆ, ಇವತ್ತಿನ ಬದಲಾದ ಕಾಲಘಟ್ಟದಲ್ಲಿ ಕಂಪ್ಯೂಟರ್ ಶಿಕ್ಷಣ ಕಲಿಯುವುದು ಅನಿವಾರ್ಯವಾಗಿದೆ. ಖಾಸಗಿ ಮತ್ತು ಸರ್ಕಾರಿ ಕಚೇರಿಗಳಲ್ಲಿ ಕಂಪ್ಯೂಟರ್ ಜ್ಞಾನ ಕೇಳಲಾಗುತ್ತದೆ ಹಾಗಾಗಿ ಪ್ರತಿಯೊಬ್ಬರು ಕಂಪ್ಯೂಟರ್ ತರಬೇತಿ ಮತ್ತು ಟೈಲರಿಂಗ್ ತರಬೇತಿಯನ್ನು ಉತ್ತಮವಾಗಿ ಪಡೆದುಕೊಳ್ಳಬೇಕು ಎಂದರು.

ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ ಅಧ್ಯಕ್ಷ ಭೀಮರಾಜ ಪ್ರಾಸ್ತಾವಿಕ ವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಮರಬ್ಬಿಹಾಳ್ ಗ್ರಾ.ಪಂ ಅಧ್ಯಕ್ಷರಾದ ಶಂಕರ್ ನಾಯ್ಕ್, ಉಪಾಧ್ಯಕ್ಷರಾದ ಅಖೀಲಭಾನು, ಗ್ರಾ.ಪಂ ಸದಸ್ಯ ಯಮುನಪ್ಪ, ಗ್ರಾಮದ ಮುಖಂಡರಾದ ಖುಷಿಂದ್ರ, ನಾಗಪ್ಪ, ಗೋಪಿಕಾ, ಎಸ್.ಎಲ್ ಆರ್ ಕಂಪನಿಯ ಹಿರಿಯ ಅಧಿಕಾರಿಗಳಾದ ರಾಜೀ, ಸಿಎಸ್.ಆರ್ ವಿಭಾಗದ ಮಲ್ಲಿಕಾರ್ಜುನ, ಮಾರುತಿ ಗೋಷಿ, ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ ಸಿಬ್ಬಂದಿಗಳಾದ ಬೀಮರಾಜ ಭಾಗ್ಯ, ಇಂದಿರಾ ಹಾಗೂ ಟೈಲರಿಂಗ್ ಮತ್ತು ಕಂಪ್ಯೂಟರ್ ತರಬೇತಿ ಅಭ್ಯರ್ಥಿಗಳು ಹಾಗೂ ಗ್ರಾಮಸ್ಥರು ಭಾಗಿಯಾಗಿದ್ದರು.

# ಹಸಿರಿದ್ದರೆ ಉಸಿರು ಮರೆಯದಿರಿ

### ಹಗರಿ ಗಜಾಪುರ ಶಾಲೆಯಲ್ಲಿ ಪರಿಸರ ದಿನಾಚರಣೆ



■ ಹಂಪಿ ಟೈಮ್ಸ್ ಹರಪನಹಳ್ಳಿ

ತಾಲೂಕಿನ ಹಗರಿ ಗಜಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ನಿಮಿತ್ತ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಶಿಕ್ಷಕರು ಊರಿನ ಹಿರಿಯರು ಸೇರಿ ಶಾಲೆಯ ಮೈದಾನದಲ್ಲಿ ತೆಂಗಿನ ಸಸಿಗಳನ್ನು ಮತ್ತು ಹೂ ಗಿಡಗಳನ್ನು ನೆಟ್ಟರು.

ವಿಜ್ಞಾನ ಶಿಕ್ಷಕಿ ಲಲಿತಾ ಮಾಮನಿ ಮಾತನಾಡಿ, ನಾವು ಪರಿಸರ ಸಂರಕ್ಷಣೆ ಮಾಡಿದರೆ, ಪರಿಸರ ನಮ್ಮ ರಕ್ಷಣೆ ಮಾಡುತ್ತದೆ. ಹಸಿರಿದ್ದರೆ ಉಸಿರು ಎಂಬುದನ್ನು ಮರೆಯಬಾರದು ಎಂದರು.

ಶಾಲೆಯ ಮುಖ್ಯ ಗುರುಗಳಾದ ಕುಮಾರಸ್ವಾಮಿ, ಆಂಗ್ಲ ಭಾಷಾ ಶಿಕ್ಷಕಿ ಬಸವರಾಜೇಶ್ವರಿ, ಹಿಂದಿ ಶಿಕ್ಷಕ ಕೆ.ಕೊಟ್ರೇಶ್, ದೈಹಿಕ ಶಿಕ್ಷಕಿ ಶಶಿರೇಖಾ, ಕನ್ನಡ ಶಿಕ್ಷಕ ಎಸ್ .ಅಂಜಿನಪ್ಪ ಮಾತನಾಡಿದರು. ಪ್ರಥಮ ದರ್ಜೆ ಸಹಾಯಕ ಲೋಹಿತ್, ಶಾಲೆಯ ಡಿ ಗ್ರೂಪ್ ನೌಕರರಾದ ಕೊಟ್ರಮ್ಮ ಮತ್ತು ಅಡುಗೆ ಸಿಬ್ಬಂದಿ ಸಹ ಮಕ್ಕಳೊಂದಿಗೆ ಗಿಡ ನೆಡಲು ಸಹಕರಿಸಿದರು.

## ಕಮಲಾಪುರ: ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

ಕಮಲಾಪುರ ಪುರಸಭೆ ವ್ಯಾಪ್ತಿಯಲ್ಲಿ ಬರುವ ಬಡತನ ರೇಖೆಗಿಂತ ಕೆಳಗಿನ ಅರ್ಹ ಫಲಾನುಭವಿಗಳಿಂದ ಸಾಲ ಸೌಲಭ್ಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2024–25ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ವ್ಯಕ್ತಿಗತ ಸಾಲ ಪಡೆಯಲು ಭೌತಿಕ ಗುರಿಯ ಪ್ರಮಾಣವು 8 ನಿಗದಿಪಡಿಸಲಾಗಿದೆ. ಕಮಲಾಪುರ ಪುರಸಭೆಗೆ ಸಾಮಾಜಿಕ ಕ್ರೋಢೀಕರಣ, ಸಾಂಸ್ಥಿಕ ಕಾರ್ಯಕ್ರಮ (ಎಸ್.ಎಂ.ಐ.ಡಿ) ದಡಿಯಲ್ಲಿ ಉಳಿತಾಯ ಗುಂಪುಗಳ ರಚನೆ ಮಾಡಲು, ಗುಂಪು ಸಾಲ ಹಾಗೂ ಕ್ರೆಡಿಟ್ ಲಿಂಕೇಜ್‌ಗಾಗಿ ಭೌತಿಕ ಗುರಿ ಪ್ರಮಾಣವು 1 ನಗದಿಪಡಿಸಲಾಗಿದೆ. ವೈಯಕ್ತಿಕ ಉದ್ಯಮಶೀಲತೆ (ಸಾಲ ಮತ್ತು ಸಹಾಯಧನ) ಮತ್ತು ಆರ್ಥಿಕ ಸೌಲಭ್ಯ ಪಡೆದ ಫಲಾನುಭವಿಗಳಿಗೆ ಶೇ.7ರ ಮೇಲ್ಪಟ್ಟು ಶೇಕಡವಾರು ಬಡ್ಡಿ ಮೊತ್ತವು (ಬಡ್ಡಿ ಸಹಾಯಧನ) ಈ ಯೋಜನೆಯಿಂದ ಭರಿಸಲಾಗುವುದು.

ಅರ್ಜಿಗಳನ್ನು ಜೂ.6ರಿಂದಲೇ ಈ ಕಚೇರಿಯಲ್ಲಿ ನೀಡುತ್ತಿದ್ದು ಅರ್ಜಿ ಪಡೆದು ಭರ್ತಿ ಮಾಡಿ ಜೂ.19ರೊಳಗೆ ಕಚೇರಿ ಸಮಯದಲ್ಲಿ ಸಲ್ಲಿಸಬಹುದಾಗಿದೆ. ಪೂರ್ಣವಾಗಿ ಭರ್ತಿ ಮಾಡದೇ ಇರುವ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು.

ಅರ್ಜಿಯೊಂದಿಗೆ ಪಡಿತರ ಚೀಟಿ, ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ, ಇತ್ತೀಚಿನ 2 ಪಾಸ್ ಪೋರ್ಟ್ ಕಲರ್ ಭಾವಚಿತ್ರ, 20 ರೂ. ಛಾಪಾ ಕಾಗದದ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣ ಪತ್ರ (ವಿದ್ಯಾರ್ಹತೆ ಹೊಂದಿದ್ದಲ್ಲಿ), ಅನುಭವ ಪ್ರಮಾಣ ಪತ್ರ, ಇತ್ತೀಚೆಗೆ ನಡೆಸುತ್ತಿರುವ ಉದ್ದಿಮೆಯ ಭಾವಚಿತ್ರ, ಉದ್ದಿಮೆಗೆ ಸಂಬಂಧಿಸಿದಂತೆ ಉದ್ದಿಮೆಯ ಪರವಾನಿಗೆ ಪತ್ರ ಮತ್ತು ಯೋಜನಾ ವರದಿ, ವಿಕಲಚೇತನರ ಪ್ರಮಾಣ ಪತ್ರಗಳ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬೇಕು ಎಂದು ಕಮಲಾಪುರದ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಬಾಲಕಾರ್ಮಿಕರನ್ನು ರಕ್ಷಿಸಿ, ಪುನರ್ವಸತಿ ಕಲ್ಪಿಸಿ

### ಎಡಿಸಿ ಮೊಹಮ್ಮದ್ ಝುಬೇರ್ ಹೇಳಿಕೆ । ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಪೂರ್ವಭಾವಿ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಇದೇ ಜೂ.12 ರಂದು ವಿಶ್ವ ಬಾಲಕಾರ್ಮಿಕ ಪದ್ಧತಿವಿರೋಧಿದಿನಾಚರಣೆಆಚರಿಸಲಾಗುತ್ತಿದ್ದು, ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿ ಕುರಿತು ಅರಿವು ಮೂಡಿಸುವ ಕೆಲಸವಾಗಬೇಕು. ಬಾಲಕಾರ್ಮಿಕರನ್ನು ರಕ್ಷಿಸಿ, ಅವರಿಗೆ ಪುನರ್ವಸತಿ ಕಲ್ಪಿಸುವ ಕೆಲಸವಾಗಬೇಕು ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ತಿಳಿಸಿದರು.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ತಮ್ಮ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಬೇಕು. ಇದಕ್ಕೆ ಬೇಕಾದ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಶಾಲೆಗಳಲ್ಲಿ ಪ್ರಬಂಧ ಸ್ಪರ್ಧೆ ಆಯೋಜಿಸಬೇಕು ಎಂದು ಡಿಡಿಪಿಐ ಅವರಿಗೆ ಸೂಚಿಸಿದರು.



ಜೂ.12 ರಂದು ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಮಹತ್ವ ಕುರಿತು ಅರಿವು ಮೂಡಿಸಲು ಶಾಲಾ ಮಕ್ಕಳಿಂದ ಜಾಗೃತಿ ಜಾಥಾ ಹಮ್ಮಿಕೊಳ್ಳಬೇಕು. ನಂತರ ವೇದಿಕೆ ಕಾರ್ಯಕ್ರಮ ಆಯೋಜಿಸಬೇಕು. ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಬಾಲಕಾರ್ಮಿಕ ಪದ್ಧತಿ ಕುರಿತು ವಿಶೇಷ ಉಪನ್ಯಾಸ ನೀಡಲು ಕರೆಸಬೇಕು ಎಂದು ತಿಳಿಸಿದರು.

ಪ್ರಸ್ತಕ ಸಾಲಿನ ಶಾಲಾ ತರಗತಿಗಳು ಆರಂಭವಾಗಿರುವುದರಿಂದ, ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರುವ ಕೆಲಸವಾಗಬೇಕು. ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಅನಿರೀಕ್ಷಿತ ದಾಳಿ ನಡೆಸಬೇಕು. ವಿವಿಧ ಕೆಲಸಗಳಲ್ಲಿ ತೊಡಗಿರುವ ಬಾಲಕಾರ್ಮಿಕರನ್ನು ಪತ್ತೆಹಚ್ಚಿ ಶೈಕ್ಷಣಿಕವಾಗಿ ಮುನ್ನಲೆಗೆ ತರಲು ಪೋಷಕರ ಮನಃ ಪರಿವರ್ತನೆಗೊಳಿಸುವ ಕಾರ್ಯವಾಗಬೇಕು ಎಂದು ಹೇಳಿದರು.

ಬಾಲಕಾರ್ಮಿಕ ಪದ್ಧತಿಯನ್ನು ತಡೆಯಲು ಎಲ್ಲಾ ಇಲಾಖೆ ಮತ್ತು ಸಂಘ–ಸಂಸ್ಥೆಗಳ ಸಹಕಾರ ಅಗತ್ಯವಿದೆ ಎಂದರು.

ಸಭೆಯಲ್ಲಿ ಬಾಲಕಾರ್ಮಿಕ ಯೋಜನೆಯ ಯೋಜನಾಧಿಕಾರಿ ಮೌನೇಶ್, ಜಿಲ್ಲಾ ಕಾರ್ಮಿಕ ಅಧಿಕಾರಿ ಕಮಲ್ ಷಾ ಅಲ್ತಾಫ್ ಅಹಮದ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್, ಡಿಡಿಪಿಐ ಉಮಾದೇವಿ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಜೂ.12ಕ್ಕೆ ಕೌನ್ಸಿಲಿಂಗ್ ಪ್ರಕ್ರಿಯೆ

■ ಹಂಪಿ ಟೈಮ್ಸ್ ಬಳ್ಳಾರಿ

ಪ್ರಸ್ತಕ ಸಾಲಿನ ಅಲ್ಪಸಂಖ್ಯಾತರ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ 6ನೇ ತರಗತಿ ದಾಖಲಾತಿಗೆ ಈಗಾಗಲೇ ಪ್ರವೇಶ ಪರೀಕ್ಷೆ ನಡೆದಿದ್ದು, ಆಯ್ಕೆಯಾದ ವಿದ್ಯಾರ್ಥಿಗಳಿಗೆ ಜೂನ್ 12 ರಂದು ಕೌನ್ಸಿಲಿಂಗ್ ಪ್ರಕ್ರಿಯೆ ಏರ್ಪಡಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ.

ನಗರದ ಹೊಸಪೇಟೆ ರಸ್ತೆಯ ಅಲ್ಲಿಪುರದ ಬಿಎಟಿಎಂ ಕಾಲೇಜು ಬಳಿಯ ಅಲ್ಪಸಂಖ್ಯಾತರ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಜೂ.12 ರಂದು ಬೆಳಿಗ್ಗೆ 10.30 ಕ್ಕೆ 6ನೇ ತರಗತಿ ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಪ್ರವೇಶದ ಸೀಟ್‌ನ್ನು (ವಸತಿ ಶಾಲೆಯನ್ನು) ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ಕೌನ್ಸಿಲಿಂಗ್ ಹಾಜರಾಗುವ ವಿದ್ಯಾರ್ಥಿಗಳು ತಪ್ಪದೇ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಬೇಕು. 5 ಫೋಟೋ, ಹಾಲ್ ಟಿಕೆಟ್ (ಪ್ರವೇಶ ಪತ್ರ), ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್‌ಕಾರ್ಡ್, ವಿಶೇಷ ಕೋಟದಲ್ಲಿ ಆಯ್ಕೆಯಾದ ಪ್ರಮಾಣ ಪತ್ರ, 5ನೇ ತರಗತಿ ಅಂಕಪಟ್ಟಿ ಸೇರಿದಂತೆ ಎಲ್ಲಾ ದಾಖಲೆಗಳನ್ನು ದ್ವಿ ಪ್ರತಿಯಲ್ಲಿ ಝೆರಾಕ್ಸ್ ತರಬೇಕು. ಹೆಚ್ಚಿನ ಮಾಹಿತಿಗಾಗಿ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ(ಸಿ.ಬಿ.ಎಸ್.ಇ) ಪ್ರಾಂಶುಪಾಲರ ಮೊ.7353346069, ಸಂಡೂರಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ.9480933730, ಕಂಪ್ಲಿಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ.9113280239 ಗೆ ಸಂಪರ್ಕಿಸಬಹುದು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA